# ಅಖಿಲ ಭಾರತ ಪತ್ರಿಕೆ


**ಸಂಪಾದಕರು, ಧಾರವಾಡ**
ಡಾ॥ ಕೆ.ಎಸ್. ಆಮೂರ,
ಎಂ.ಎಸ್ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ದಾರವಾಡ**
ಡಾ॥ ಗುರುಲಿಂಗಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಅಧ್ಯಕ್ಷರು, ಶ್ರೀ ಅರವಿಂದೋ ಸೊಸೈಟಿ
ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882


## ಪರಿವಿಡಿ

**"ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರ ನುಡಿಗಳು"**


**ಅನು : ಡಾ॥ ಕೆ.ಎಸ್. ಆಮೂರ**
ಅಚಂಚಲರಾಗಿ ಕುಳಿತುಕೊಳ್ಳಿರಿ ಮತ್ತು ಅಂತರಂಗದತ್ತ ಸಾಗಿ ಹೋಗಿರಿ 03

**ಅನು : ಶ್ರೀ ಪುರುಷೋತ್ತಮ ಗಲಗಲಿ**
ನಿನ್ನನ್ನೇ ಸ್ವತಃ ಹಾಗೂ ನಿನ್ನ ಮಣಿಹವನ್ನು ತಿಳಿದುಕೋ 04

**ಅನು : ಡಾ॥ ಕೆ.ಎಸ್. ಆಮೂರ**
ಸಮುದ್ರದಲ್ಲಿರುವ ನೀರಿನ ಚಿಕ್ಕ ಹನಿಯಂತೆ ಉಳಿದುಕೊಳ್ಳಬೇಡಿರಿ 07

ಆಧ್ಯಾತ್ಮಿಕತೆ ಹಾಗೂ ನೈತಿಕತೆ ಇವುಗಳ ನಡುವಿರುವ ಭೇದ 12

ಯಾರು (ಕವಿತೆ) 16

ಶ್ರೀ ಅರವಿಂದರು ಕೊಡುವ ಭರವಸೆ 17

**ಅನು : ಶ್ರೀ ವೀರೇಂದ್ರ ಸಿಂಪಿ**
ದೇಹವೂ ಕೂಡ ದೇವನನ್ನು ನೆನಪಿಸಿಕೊಳ್ಳುತ್ತದೆ 18

**ಅನು : ಡಾ॥ ಕೆ.ಎಸ್. ಆಮೂರ**
ಆಧ್ಯಾತ್ಮಿಕ ಶಕ್ತಿಯಿಂದ ರೋಗ ಗುಣಪಡಿಸುವುದು 23

ಆಂತರಿಕ ಸಾಧನದ ಮೂಲಕ ರೋಗ ಗುಣಪಡಿಸುವುದು 29

**ಅನುಬಂಧ**
ಸಂತೋಷಕರ ಶಾಂತಿ, ಪ್ರಕಾಶಮಯ ಹಾಗೂ ಬದಲಾಗದ ಪ್ರಶಾಂತತೆ ಇವುಗಳಿಗಾಗಿ. 35

ಆಶ್ರಮವಾಸಿಯಾದ ಜಾನಿನಾ ಸ್ಟ್ರೋಕಾ ತನ್ನ ಡಚ್ ಗೆಳತಿಗೆ 1957ರಲ್ಲಿ ಬರೆದ ಪತ್ರದಿಂದ ಎತ್ತಿ ತೆಗೆದ ಭಾಗ 36

**ವಾರ್ತಾಪತ್ರ** 39


*ವಿ.ಸೂ : ಪ್ರತಿತಿಂಗಳು ಅಖಿಲ ಭಾರತ ಪತ್ರಿಕೆಗಾಗಿ ಅನುವಾದಗೊಂಡು ಪ್ರಕಟವಾಗುತ್ತಿರುವ ಮೂಲ ಇಂಗ್ಲಿಷ್ ಅವತರಣಿಕೆಗಳನ್ನು ಶ್ರೀ ಅರವಿಂದೋ ಸೊಸೈಟಿ, ಪಾಂಡಿಚೇರಿ ಅವರು ಅದೇ ತಿಂಗಳಿನ All India Magazine ದಲ್ಲಿ ಪ್ರಕಟಿಸುತ್ತಾರೆ, ಕೆಲವೊಮ್ಮೆ ಕೊನೆಯ ಕ್ಷಣಗಳಲ್ಲಿ ಹೆಚ್ಚಿನ ಲೇಖನಗಳನ್ನು ಸೇರಿಸಿರುತ್ತಾರೆ. ಅನುಬಂಧದಲ್ಲಿ ಕೊಡಲಾದ ಲೇಖನಗಳು ಆ ವರ್ಗಕ್ಕೆ ಸೇರಿರುತ್ತವೆ. ನವೆಂಬರ್ 2010ರ ಸಂಚಿಕೆಯಲ್ಲಿ ಅವು ಪ್ರಕಟವಾಗಿದ್ದವು. (ಸಂ)*


**ಬೆಲೆ : 15/–**


# ಶ್ರೀ ಅರವಿಂದರು
# ಹಾಗೂ
# ಶ್ರೀಮಾತೆಯವರ ನುಡಿಗಳು

## ಅಚಂಚಲರಾಗಿ ಕುಳಿತುಕೊಳ್ಳಿರಿ ಮತ್ತು ಅಂತರಂಗದತ್ತ ಸಾಗಿ ಹೋಗಿರಿ

ಈ ಎಲ್ಲ ಸದ್ದು, ಚಲನೆ, ಈ ವ್ಯರ್ಥ ಹಾಗೂ ನಿರರ್ಥಕ ತಳಮಳ ಏಕಿದೆ? ಬಿರುಗಾಳಿಯಲ್ಲಿ ಸಿಕ್ಕಿಹಾಕಿಕೊಂಡ ನೊಣಗಳ ಗುಂಪನ್ನು ಆ ಗಾಳಿ ಕೊಂಡೊಯ್ಯು–ತ್ತಿರುವಂತೆ ಈ ಸುಳಿಗಾಳಿ ಮನುಷ್ಯರನ್ನು ಕೊಂಡೊಯ್ಯುತ್ತಿರುವುದೇಕೆ? ಹಾಳಾಗಿ ಹೋದ ಚೈತನ್ಯಗಳ ಹಾಗೂ ನಿರುಪಯೋಗಿ ಪ್ರಯತ್ನಗಳ ನೋಟ ಅದೆಷ್ಟು ವಿಷಾದಕರವಾದದ್ದು! ಯಾರಿಂದ ಮತ್ತು ಯಾತಕ್ಕಾಗಿ ಎಂಬುದು ತಿಳಿಯದೆ ಎಳೆತಕ್ಕೊಳಗಾದ ಸೂತ್ರದ ಬೊಂಬೆಗಳ ಹಾಗೆ ಜನರು ಕುಣಿಯುವುದನ್ನು ಎಂದು ನಿಲ್ಲಿಸುತ್ತಾರೆ? ಅಚಂಚಲರಾಗಿ ಕುಳಿತುಕೊಂಡು, ಅಂತರಂಗದಲ್ಲಿ ಸಾಗಿ ಹೋಗುವು–ದಕ್ಕಾಗಿ, ತಮ್ಮನ್ನು ತಾವೇ ಜ್ಞಾಪಿಸಿಕೊಳ್ಳುವುದಕ್ಕಾಗಿ, ಮತ್ತು ಭಗವಂತ, ನಿನ್ನ ಅಮೂಲ್ಯ ಸಂಪತ್ತನ್ನು, ನಿನ್ನ ಅನಂತ ವರಗಳನ್ನು ಮರೆಯಲ್ಲಿರಿಸಿರುವ ಆ ಆಂತರಿಕ ದ್ವಾರವನ್ನು ತೆರೆದಿರಿಸುವುದಕ್ಕಾಗಿ ಅವರು ಎಂದು ಸಮಯ ದೊರಕಿಸುತ್ತಾರೆ?

ಭಗವಂತ, ಘನತೆವೆತ್ತ ನಿನ್ನ ಪ್ರಕಾಶದ ಒಂದು ಕಿಡಿ, ನಿನ್ನ ದೈವೀ ಪ್ರೇಮದ ಒಂದು ಹನಿ ವೇದನೆಯನ್ನು ದಿವ್ಯಾನಂದದ ಸಾಗರವನ್ನಾಗಿ ಮಾರ್ಪಡಿಸಲು ಶಕ್ತ–ವಾಗಿರುವಾಗ, ಜನರ ಅಜ್ಞಾನದ ಹಾಗೂ ಮಬ್ಬುತನದ ಜೀವನ ಅತ್ಯಂತ ವೇದನಾ–ಪೂರ್ಣವಾದದ್ದು, ದುಃಖದಾಯಕವಾದದ್ದು ಮತ್ತು ಹುಚ್ಚುತನದ ತಳಮಳ ಮತ್ತು ಹಾನಿಕಾರಕ ಹರಡಿಕೊಳ್ಳುವಿಕೆಗಳಿಂದ ಕೂಡಿಕೊಂಡದ್ದು ಎಂದು ನನಗೆ ತೋರಿ–ಬರುತ್ತದೆ.

ಓ, ಪ್ರಭುವೇ ಕೊನೆಗಾದರೂ ಅವರು ನಿನ್ನ ಪ್ರಶಾಂತತೆಯಿಂದ ಬರುವ ದೈವೀ ಶಾಂತಿ, ಸ್ಥಿರ ಮತ್ತು ಪ್ರತಿರೋಧಿಸಲಾಗದ ಬಲಗಳನ್ನು ಕಂಡುಕೊಳ್ಳುವಂತಾಗಲಿ. ಅವರು ಕಣ್ಣುಗಳನ್ನು ತೆರೆದಿರಿಸಿಕೊಂಡವರು ಮತ್ತು ತಮ್ಮ ಸತ್ತೆಯ ಜ್ವಲಿಸುತ್ತಿರುವ ಅಂತಸ್ಸಾರದಲ್ಲಿ ನಿನ್ನನ್ನು ಕುರಿತು ಧ್ಯಾನದಲ್ಲಿರುವ ಭಾಗ್ಯವನ್ನು ಪಡೆದುಕೊಂಡವರು ಆಗಲಿ ಎಂದು ನನ್ನ ಪ್ರಾರ್ಥನೆ ಮೇಲಕ್ಕೇರುತ್ತ ನಿನ್ನೆಡೆಗೆ ಸಾಗುತ್ತದೆ.

ಆದರೆ ನಿನ್ನ ಪ್ರಕಟಣೆಯ ಗಳಿಗೆ ಆಗಮಿಸಿದೆ.

ಮತ್ತು ಅಲ್ಪ ಸಮಯದಲ್ಲಿ ಆನಂದದ ಸ್ತೋತ್ರಗಳು ಎಲ್ಲ ಬದಿಗಳಿಂದ ಹೊರಚಿಮ್ಮಿ ಬರುವವು.



ಈ ಗಳಿಗೆಯ ಘನತೆಯ ಸಮ್ಮುಖದಲ್ಲಿ ನಾನು ಭಕ್ತಿಯಿಂದ ಬಾಗಿ ನಮಿಸುತ್ತೇನೆ.

ನವ್ಹೆಂಬರ 20, 1913 **– ಶ್ರೀಮಾತೆ**

*

## ನಿನ್ನನ್ನೇ ಸ್ವತಃ ಹಾಗೂ ನಿನ್ನ ಮಣಿಹವನ್ನು ತಿಳಿದುಕೋ

(2/38–40) ಪ್ರತಿಯೊಬ್ಬನ ಆತ್ಮ ಮತ್ತು ವಿಶ್ವಂಭರ ವಿಶಾಲ ದಿವ್ಯಾತ್ಮ ಇವೆರಡೂ ಒಂದೇ ಆಗಿವೆ, ಏಕೆಂದರೆ ಇರುವುದೆಲ್ಲವೂ ಎಲ್ಲ ಸನಾತನ ಕಾಲದಿಂದ, ಅದರ ಸಾರದಲ್ಲಿ ಮತ್ತು ತತ್ವದಲ್ಲಿ ಅಸ್ತಿತ್ವದಲ್ಲಿರುತ್ತದೆ. ಸತ್ತೆ ಮತ್ತು ಅದರ ಮೂಲ ಇವುಗಳಲ್ಲಿ, ನಾವು ಮೊದಲಿಗೆ ಏನನ್ನು ಇರಿಸುವೆವೋ ಅದರಲ್ಲಿ ಮತ್ತು ನಮ್ಮಲ್ಲಿ ಭೇದವನ್ನೇಕೆ ಮಾಡಬೇಕು?

ಪ್ರಾಚೀನ ಸಂಪ್ರದಾಯಗಳು ಸರಿಯಾಗಿಯೇ ಹೇಳಿವೆ: "ನಮ್ಮ ಮೂಲ ಹಾಗೂ ನಾವೇ ಸ್ವತಃ, ನಮ್ಮ ದೇವ ಹಾಗೂ ನಾವೇ ಸ್ವತಃ ಒಂದೇ ಆಗಿದ್ದೇವೆ."

ಮತ್ತು ಈ ಒಂದುಗೂಡುವಿಕೆಯು ಕೇವಲ ಹತ್ತಿರದ ಹಾಗೂ ನಿಕಟವಾದ ಹೆಚ್ಚು ಕಡಿಮೆ ಸಂಬಂಧವೆಂದು ತಿಳಿಯಬಾರದು, ಆದರೆ ಅದನ್ನು ನಿಜವಾದ ತಾದಾತ್ಮ್ಯ ಎಂದು ತಿಳಿಯಬೇಕು.

ಹೀಗೆ ಭಗವಂತನನ್ನು ಅರಸುವ ಮನುಷ್ಯ ತಲುಪಲಾಗದರತ್ತ ಹಂತ ಹಂತವಾಗಿ ಮೇಲ್ಗಡೆ ಸಾಗಲು, ಆರೋಹಣ ಮಾಡಲು ಪ್ರಯತ್ನಿಸುತ್ತಾನೆ. ತನ್ನ ಎಲ್ಲ ಜ್ಞಾನ, ಅಂತರ್ಬೋಧೆ ಇವು ಅನಂತದಲ್ಲಿ ಅವನನ್ನು ಒಂದು ಹೆಜ್ಜೆ ಕೂಡ ಮುಂದೊಯ್ಯಲಾರವು ಎಂಬುದನ್ನು ಅವನು ಮರೆಯುತ್ತಾನೆ. ಅಲ್ಲದೆ ಏನನ್ನು ಸಿದ್ಧಿಸಿಕೊಳ್ಳಬೇಕೆಂಬುದೂ ತಿಳಿದಿರುವುದಿಲ್ಲ. ತನ್ನಿಂದ ಬಹಳ ದೂರವಿದೆ ಎಂದು ನಂಬಿದ್ದು ಅವನ ಅಂತರಂಗದಲ್ಲಿಯೇ ಇದೆ.

ಏಕೆಂದರೆ ತನ್ನಲ್ಲಿರುವ ತನ್ನ ಮೂಲವನ್ನೇ ಅರಿತುಕೊಳ್ಳುವವರೆಗೆ ಅವನು ದಿವ್ಯ ಮೂಲದ ಬಗ್ಗೆ ಏನನ್ನಾದರೂ ತಿಳಿದುಕೊಳ್ಳುವುದು ಹೇಗೆ ಸಾಧ್ಯವಾದೀತು?

ತನ್ನನ್ನು ತಿಳಿದುಕೊಳ್ಳುವುದರ ಮೂಲಕ, ತನ್ನನ್ನು ತಿಳಿದುಕೊಳ್ಳುವುದನ್ನು ಕಲಿತುಕೊಳ್ಳುವುದರ ಮೂಲಕ, ಅವನು ಪರಮೋಚ್ಚ ಶೋಧವನ್ನು ಮಾಡಬಲ್ಲನು.

ಮತ್ತು ಬೈಬಲ್ಲಿನ ಮೂಲ ಪ್ರವರ್ತಕನ ಹಾಗೆ: "ಭಗವಂತನ ಮನೆ ಇಲ್ಲಿಯೇ ಇದೆ, ನನಗದು ತಿಳಿದಿರಲಿಲ್ಲ" ಎಂದು ಕೂಗಿ ಹೇಳಬಲ್ಲನು.

ಮತ್ತು ಆ ಕಾರಣದಿಂದಾಗಿಯೇ "ನಾನು ಎಲ್ಲ ವಸ್ತು–ವಿಷಯಗಳಲ್ಲಿ ಹಾಗೂ ಎಲ್ಲ ಸತ್ತೆಗಳಲ್ಲಿ ಇದ್ದೇನೆ" ಎಂಬ ಘನತೆವೆತ್ತ, ಸೃಷ್ಟಿಕರ್ತೆಯ ರೂಪದಲ್ಲಿರುವ, ಸ್ವರ್ಗಲೋಕ ಮತ್ತು ಮರ್ತ್ಯಲೋಕಗಳನ್ನು ತುಂಬಿಕೊಳ್ಳುವ ಯೋಚನೆಯನ್ನು ಅಭಿವ್ಯಕ್ತಗೊಳಿಸಬೇಕು ಮತ್ತು ಎಲ್ಲರಿಗೂ ತಿಳಿಯುವಂತೆ ಮಾಡಬೇಕು. ಎಲ್ಲರೂ ಇದನ್ನು ತಿಳಿದುಕೊಂಡನಂತರ, ಬರಲಿರುವುದೆಂದು ವಚನ ಕೊಡಲಾದ ರೂಪಾಂತರಗೊಳಿಸುವ ಶ್ರೇಷ್ಠ ದಿನ ಸಮೀಪವಾಗುತ್ತದೆ. ಪ್ರತಿಯೊಂದು ಪರಮಾಣುವಿನಲ್ಲಿ ಜನರು ಅಂತರ್ನಿವಾಸಿ ಭಗವಂತನ ಯೋಚನೆಯನ್ನು ಗುರುತಿಸಿದಾಗ, ಪ್ರತಿಯೊಂದು ಜೀವಿಯಲ್ಲಿ ಅವರು ಭಗವಂತನಿರುವ ಇಂಗಿತ ಸೂಚನೆಯನ್ನು ಗ್ರಹಿಸಿದಾಗ, ಪ್ರತಿಯೊಬ್ಬ ಮನುಷ್ಯ ತನ್ನ ಸಹೋದರನಲ್ಲಿ ಭಗವಂತನನ್ನು ನೋಡಲು ಶಕ್ತನಾದಾಗ ಪ್ರಕೃತಿಗೆ ಭಾರವಾಗಿರುವ ಅಂಧಕಾರವನ್ನು, ಮಿಥ್ಯೆಯನ್ನು, ಅಜ್ಞಾನವನ್ನು, ದೋಷವನ್ನು, ವೇದನೆಯನ್ನು ನಿವಾರಿಸುವ ಅರುಣೋದಯವಾಗುತ್ತದೆ. ಏಕೆಂದರೆ ದಿವ್ಯಪುತ್ರರ ದಿವ್ಯಜ್ಞಾನಕ್ಕಾಗಿ ಕಾದುಕೊಂಡು ಕುಳಿತಿರುವಾಗ ಪ್ರಕೃತಿ ವೇದನೆಗೊಳಗಾಗುತ್ತದೆ, ಗೋಳಾಡುತ್ತದೆ.

ಇದೇ ನಿಜವಾಗಿ ಬೇರೆ ಎಲ್ಲ ಯೋಚನೆಗಳನ್ನು ಪ್ರತಿರೂಪಿಸುವ ಪ್ರಮುಖ ಯೋಚನೆ, ಎಲ್ಲ ಜೀವನವನ್ನು ಬೆಳಗಿಸುವ ಸೂರ್ಯನಿರುವ ಹಾಗೆ ಈ ಯೋಚನೆಯು ನಮ್ಮ ನೆನಪಿನಲ್ಲಿ ಸದಾ ಇರಬೇಕು.

ಆ ಕಾರಣದಿಂದಾಗಿಯೇ ನಾನಿದನ್ನು ಇಂದು ನಿಮ್ಮ ನೆನಪಿಗೆ ತಂದು–ಕೊಡುತ್ತಿದ್ದೇನೆ; ಅತಿ ಅಪರೂಪದ, ಅತ್ಯಂತ ಬೆಲೆಬಾಳುವ ರತ್ನವನ್ನು ಕಾದಿಟ್ಟುಕೊಳ್ಳುವ ರೀತಿಯಲ್ಲಿ ಪ್ರಕಾಶ ನೀಡುವ, ರೂಪಾಂತರಗೊಳಿಸುವ ಈ ವಿಚಾರವನ್ನು ಇಟ್ಟುಕೊಂಡು ಮಾರ್ಗವನ್ನು ಅನುಸರಿಸಿದರೆ, ಮತ್ತು ಆ ವಿಚಾರ ತನ್ನ ಕಾರ್ಯವನ್ನು ಮಾಡಲು ಅನುವು ಮಾಡಿಕೊಟ್ಟರೆ, ಅದು ಎಲ್ಲ ಸತ್ತೆಗಳ ಹಾಗೂ ಎಲ್ಲ ವಸ್ತು–ವಿಷಯಗಳ ಕೇಂದ್ರದಲ್ಲಿ ಜೀವಿಸುತ್ತದೆಂಬುದನ್ನು ನಾವು ತಿಳಿದುಕೊಳ್ಳುವೆವು. ಮತ್ತು ವಿಶ್ವದ ಅದ್ಭುತ ಏಕತೆಯನ್ನು ಭಾವನೆಗೆ ತಂದುಕೊಳ್ಳುವೆವು.

ಅತ್ಯಲ್ಪ ತೃಪ್ತಿಗಳ ಆಡಂಬರದ ಪ್ರದರ್ಶನ ಮತ್ತು ಬಾಲಿಶತನ, ಮೂರ್ಖತನದ ನಮ್ಮ ಜಗಳಗಳು, ನಮ್ಮ ಕ್ಷುದ್ರ ಭಾವೋದ್ರೇಕಗಳು, ನಮ್ಮ ಅಂಧ ರೋಷ ಇವುಗಳನ್ನು



ಕುರಿತು ನಂತರ ನಾವು ತಿಳಿದುಕೊಳ್ಳುವೆವು. ನಮ್ಮ ಚಿಕ್ಕ ಪುಟ್ಟ ದೋಷಗಳು ಕರಗಿ ಹೋಗುವುದನ್ನು, ನಮ್ಮ ಸೀಮಿತ ವ್ಯಕ್ತಿತ್ವವನ್ನು, ಮಂದ ಬುದ್ಧಿಯ ಅಹಂಮನ್ಯತೆಯನ್ನು ಸುತ್ತುವರಿದ ಕಂದಕ ಪುಡಿ, ಪುಡಿಯಾಗಿ ಹೋಗುವುದನ್ನು ನಾವು ನೋಡುತ್ತೇವೆ. ನಿಜವಾದ ಆಧ್ಯಾತ್ಮಿಕತೆಯ ಈ ಘನತೆವೆತ್ತ ಪ್ರವಾಹ ನಮ್ಮನ್ನು ಸೆಳೆದುಕೊಂಡು ಹೋಗುವುದರ ಅನುಭವ ನಮಗಾಗುತ್ತದೆ, ಆ ಪ್ರವಾಹವು ನಮ್ಮನ್ನು ನಮ್ಮ ಸಂಕುಚಿತ ಮಿತಿಗಳಿಂದ ಹಾಗೂ ಬಂಧನಗಳಿಂದ ಪಾರುಮಾಡುತ್ತದೆ.

ವ್ಯಕ್ತಿವಿಶಿಷ್ಟ ಆತ್ಮ ಹಾಗೂ ವಿಶ್ವಂಭರ ದಿವ್ಯಾತ್ಮ ಒಂದೇ ಆಗಿದೆ, ಪ್ರತಿಯೊಂದು ಜಗತ್ತಿನಲ್ಲಿ, ಪ್ರತಿಯೊಂದು ಸತ್ತೆಯಲ್ಲಿ ಮತ್ತು ಪ್ರತಿಯೊಂದು ಪರಮಾಣುವಿನಲ್ಲಿ ದೈವೀ ಸಾನ್ನಿಧ್ಯವಿದೆ, ಮನುಷ್ಯನ ಮಣಿಹ ಅದನ್ನು ಪ್ರಕಟಿಸುವುದಾಗಿದೆ.

ಅದನ್ನು ಕೈಕೊಳ್ಳುವುದಕ್ಕಾಗಿ ಅವನು ತನ್ನೊಳಗಿರುವ ಈ ದೈವೀ ಸಾನ್ನಿಧ್ಯದ ಬಗ್ಗೆ ಅರಿವುಳ್ಳವನಾಗಿರಬೇಕು. ಕೆಲವು ವ್ಯಕ್ತಿಗಳು ಇದನ್ನು ಸಿದ್ಧಿಸಿಕೊಳ್ಳಲು ನಿಜವಾದ ತರಬೇತು ಪಡೆಯಬೇಕಾಗುತ್ತದೆ: ಅವರ ಅಹಂಮನ್ಯತೆಯ ಸತ್ತೆ ತನ್ನೊಳಗೇ ಮಗ್ನವಾಗಿರುವಂತಹದು, ಬಹಳ ಕಠಿಣವಾದದ್ದು, ಅತಿಯಾಗಿ ಸಂಪ್ರದಾಯ–ಶರಣವಾದದ್ದು ಆಗಿರುತ್ತದೆ, ದೈವೀ ಸಾನ್ನಿಧ್ಯದ ವಿರುದ್ಧ ಅವರ ಘರ್ಷಣೆಗಳು ದೀರ್ಘವಾಗಿರುತ್ತವೆ, ದುಃಖದಾಯಕವಾಗಿರುತ್ತವೆ. ತದ್ವಿರುದ್ಧವಾಗಿ ಹೆಚ್ಚು ಅವೈಯಕ್ತಿಕರಾದ, ಹೆಚ್ಚು ನಮ್ಯರಾದ, ಹೆಚ್ಚು ಆಧ್ಯಾತ್ಮೀಕರಣಗೊಂಡ ಇತರರು ಸುಲಭವಾಗಿ ತಮ್ಮ ಸತ್ತೆಯಲ್ಲಿರುವ ಬತ್ತಿಹೋಗದ ದೈವೀ ಮೂಲದ ಸಂಪರ್ಕದಲ್ಲಿ ಬರುತ್ತಾರೆ. ಆದರೆ ಅವರೂ ಕೂಡ ತಮ್ಮನ್ನು ಪ್ರತಿದಿನ, ಸತತವಾಗಿ ಕ್ರಮಬದ್ಧ, ಹೊಂದಾಣಿಕೆ ಮಾಡಿಕೊಳ್ಳುವ, ಪರಿವರ್ತನೆಗೊಳಗಾಗುವ ಪ್ರಯತ್ನದಲ್ಲಿ ತೊಡಗಿಕೊಂಡಿರಬೇಕೆಂಬುದನ್ನು ಮರೆಯಬಾರದು. ಅದರಿಂದಾಗಿ ಅವರೊಳಗಿರುವ ಯಾವುದೂ ಈ ಪರಿಶುದ್ಧ ಪ್ರಕಾಶದ ತೇಜಸ್ಸನ್ನು ಮತ್ತೆಂದಿಗೂ ಮಬ್ಬುಗೊಳಿಸದಂತಾಗಬಹುದು.

ಆದರೆ, ಒಮ್ಮೆ ಈ ಆಳಾತಿಆಳದ ಪ್ರಜ್ಞೆಯನ್ನು ಸಿದ್ಧಿಸಿಕೊಂಡ ನಂತರ ಅದೆಷ್ಟು ಭವ್ಯ ರೀತಿಯಲ್ಲಿ ನಿಲುವು ಬದಲಾಗುವುದು! ತಿಳಿವಳಿಕೆ ಎಷ್ಟೊಂದು ವಿಸ್ತಾರಗೊಳ್ಳುವುದು, ಕರುಣೆ ಅದೆಷ್ಟು ಭವ್ಯ ರೀತಿಯಲ್ಲಿ ಬೆಳೆಯತೊಡಗುವುದು!

**–ಶ್ರೀಮಾತೆ**

*

## ಸಮುದ್ರದಲ್ಲಿರುವ ನೀರಿನ ಚಿಕ್ಕ ಹನಿಯಂತೆ ಉಳಿದುಕೊಳ್ಳಬೇಡಿರಿ

(3/114–117) ನಮ್ಮ ಯೋಗದಲ್ಲಿ ತ್ಯಾಗಕ್ಕೆ ಸ್ಥಾನವಿರುವುದಿಲ್ಲ. ಆದರೆ ನಾವು ಆ ಶಬ್ದಕ್ಕೆ ಯಾವ ಅರ್ಥವನ್ನು ಕೊಡುತ್ತೇವೆ ಎಂಬುದರ ಮೇಲೆ ಎಲ್ಲವೂ ಅವಲಂಬಿಸಿ–ರುತ್ತದೆ. ಅದರ ಶುದ್ಧ ಭಾವದಲ್ಲಿ ಅದರರ್ಥ ಅರ್ಪಣಾಭಾವದಿಂದ ತನ್ನನ್ನು ಕೊಟ್ಟು–ಕೊಳ್ಳುವುದಾಗಿರುತ್ತದೆ, ಭಗವಂತನಿಗಾಗಿ ಪವಿತ್ರವಾಗಿರುವಂತೆ ಮಾಡಿಕೊಳ್ಳು–ವುದಾಗಿರುತ್ತದೆ. ಆದರೆ ತ್ಯಾಗಕ್ಕೆ ಸದ್ಯ ಇರುವ ಪ್ರಾಮುಖ್ಯತೆಯ ಪ್ರಕಾರ ಅದು ಏನನ್ನೋ ಹಾಳುಮಾಡುವುದಕ್ಕಾಗಿ ಕಾರ್ಯಮಾಡುವುದಾಗಿರುತ್ತದೆ, ಅದು ತನ್ನ ಸುತ್ತ ಅಭಾವಾತ್ಮಕ ವಾತಾವರಣವನ್ನು ಕೊಂಡೊಯ್ಯುತ್ತದೆ, ಈ ಬಗೆಯ ತ್ಯಾಗ ಫಲಪ್ರದತೆ ಕಂಡುಕೊಳ್ಳುವುದಿಲ್ಲ, ಅದು ಬದುಕಿಗೆ ಅಗತ್ಯವಾದದ್ದನ್ನು ಕಳೆದುಕೊಳ್ಳುತ್ತದೆ. ಮನುಷ್ಯ ತನ್ನನ್ನೇ ಆಹುತಿ ಕೊಡುತ್ತಿರುವಂತಿರುತ್ತದೆ, ತನ್ನ ಸಾಧ್ಯತೆಗಳನ್ನು ಬಲಿಕೊಡು–ವಂತಿರುತ್ತದೆ. ಅತ್ಯಂತ ಪ್ರಾಪಂಚಿಕವಾದದ್ದರಿಂದ ಹಿಡಿದು ಅತ್ಯುಚ್ಚ ಆಧ್ಯಾತ್ಮಿಕ ವ್ಯಾಪ್ತಿ–ಯವರೆಗೆ ನಿಮ್ಮ ವ್ಯಕ್ತಿತ್ವ ಸಿದ್ಧಿಸಿಕೊಳ್ಳಬಹುದಾದ ಸಾಧ್ಯತೆಗಳನ್ನು ಹಾಗೂ ಸಿದ್ಧಿಗಳನ್ನು ತ್ಯಾಗ ಮಾಡುವುದಾಗಿರುತ್ತದೆ. ತ್ಯಾಗ ನಿಮ್ಮ ಸತ್ತೆಯನ್ನು ಕುಗ್ಗಿಸುತ್ತದೆ. ಭೌತಿಕವಾಗಿ ನಿಮ್ಮ ಜೀವನವನ್ನು, ದೇಹವನ್ನು ತ್ಯಾಗ ಮಾಡಿದಾಗ, ಭೌತಿಕ ಸ್ತರದಲ್ಲಿ ನಿಮ್ಮ ಎಲ್ಲ ಸಾಧ್ಯತೆಗಳನ್ನು ಕಳೆದುಕೊಳ್ಳುತ್ತೀರಿ, ನಿಮ್ಮ ಪಾರ್ಥಿವ ಅಸ್ತಿತ್ವದ ಸಿದ್ಧಿಗಳನ್ನು ದೂರ ಮಾಡುತ್ತೀರಿ.

ಅದೇ ರೀತಿಯಲ್ಲಿ ನಿಮ್ಮ ಜೀವನವನ್ನು ನೈತಿಕವಾಗಿ ತ್ಯಾಗ ಮಾಡಬಹುದು. ನಿಮ್ಮ ಆಂತರಿಕ ಸಮೃದ್ಧಿಯನ್ನು, ನೆರವೇರಿಕೆಯನ್ನು ನೀವು ಬಿಟ್ಟುಕೊಡುತ್ತೀರಿ. ತಮ್ಮನ್ನೇ ಸ್ವತಃ ಆಹುತಿ ಕೊಡುವುದರಲ್ಲಿ ಒಂದು ಬಗೆಯ ಒತ್ತಾಯ ತರುವಿಕೆ, ಕುಗ್ಗಿಸುವಿಕೆ, ತಮ್ಮ ಮೇಲೆ ಹೇರಿಕೊಳ್ಳುವ ಸ್ವ–ನಿರಾಕರಣೆಯಿರುತ್ತದೆ. ಈ ಆದರ್ಶವು ಆತ್ಮದ ಆಳಾತಿ ಆಳದ ಮತ್ತು ವಿಶಾಲವಾದ ಸ್ವಯಂ ಪ್ರೇರಣೆಗಳಿಗೆ ಆಸ್ಪದ ಮಾಡಿಕೊಡುವುದಿಲ್ಲ. ಸಮರ್ಪಣೆಯ ಅರ್ಥವನ್ನು ನಾವು ಹೀಗೆ ಮಾಡುವುದಿಲ್ಲ. ಆದರೆ ಅದು ಸ್ವಯಂಪ್ರೇರಣೆಯಿಂದ ತನ್ನನ್ನು ಕೊಟ್ಟುಕೊಳ್ಳುವುದಾಗಿರುತ್ತದೆ. ನಿಮ್ಮ–ದಾಗಿರುವುದೆಲ್ಲವನ್ನು ಭಗವಂತನಿಗೆ ಕೊಡುವುದಾಗಿರುತ್ತದೆ, ನಿಮ್ಮದೂ ಒಂದು ಭಾಗವಾಗಿರುವ ಶ್ರೇಷ್ಠತರ ದೈವೀಪ್ರಜ್ಞೆಗೆ ಕೊಟ್ಟುಬಿಡುವುದಾಗಿರುತ್ತದೆ. ಸಮರ್ಪಣೆಯು ನಿಮ್ಮನ್ನು ಕುಗ್ಗಿಸುವುದಿಲ್ಲ. ಅಭಿವೃದ್ಧಿ ಪಡೆಯುವಂತೆ ಮಾಡುತ್ತದೆ. ಅದು ನಿಮ್ಮ ವ್ಯಕ್ತಿವಿಶಿಷ್ಟತೆಯನ್ನು ಕಡಿಮೆ ಮಾಡುವುದಿಲ್ಲ, ದುರ್ಬಲಗೊಳಿಸುವುದಿಲ್ಲ ಇಲ್ಲವೆ ಹಾಳುಮಾಡುವುದಿಲ್ಲ, ಅದನ್ನು ಅದು ಬಲಪಡಿಸುತ್ತದೆ, ಅಭಿವೃದ್ಧಿಗೊಳಿಸುತ್ತದೆ. ಸಮರ್ಪಣೆಯೆಂದರೆ ಮುಕ್ತವಾಗಿ, ಕೊಡುವುದರಲ್ಲಿರುವ ಸಂತೋಷದಿಂದ



ಕೊಟ್ಟುಕೊಳ್ಳುವುದಾಗಿರುತ್ತದೆ, ಅದರಲ್ಲಿ ತ್ಯಾಗಮಾಡುತ್ತಿರುವ ಭಾವವಿರುವುದಿಲ್ಲ. ನೀವು ತ್ಯಾಗಮಾಡುತ್ತಿರುವಿರೆಂಬ ಕಿಂಚಿತ್ ಭಾವನೆ ಅಲ್ಲಿ ಬಂದುದಾದರೆ ಆಗ ಅದು ಸಮರ್ಪಣೆ ಆಗಿರುವುದಿಲ್ಲ. ಅದರರ್ಥ ನೀವು ಏನನ್ನೋ ಕಾದಿರಿಸಿ–ಕೊಂಡಿರುತ್ತೀರಿ, ಒಲ್ಲದ ಮನಸ್ಸಿನಿಂದ ಇಲ್ಲವೆ ವೇದನೆಯಿಂದ ಮತ್ತು ಪ್ರಯತ್ನ–ಪೂರ್ವಕವಾಗಿ ಕೊಡುತ್ತಿರುವಿರಿ ಎಂದಾಗುತ್ತದೆ, ಕಾಣಿಕೆ ಅರ್ಪಿಸುವಾಗಿನ ಆನಂದ ನಿಮ್ಮಲ್ಲಿರುವುದಿಲ್ಲ, ಬಹುಶಃ ನೀವು ಕೊಡುತ್ತಿರುವ ಭಾವನೆ ನಿಮಗೆ ಬರುತ್ತಿರುವುದಿಲ್ಲ, ನಿಮ್ಮ ಸತ್ತೆಯನ್ನು ಹತ್ತಿಕ್ಕಿಟ್ಟ ಭಾವನೆಯಿಂದ ನೀವು ಏನೇ ಮಾಡಲಿ, ಅದನ್ನು ತಪ್ಪು ರೀತಿಯಲ್ಲಿ ಮಾಡುತ್ತಿರುವಿರಿ ಎಂಬುದು ಸುನಿಶ್ಚಿತ.

ನಿಜವಾದ ಸಮರ್ಪಣೆ ನಿಮ್ಮನ್ನು ವಿಕಾಸಗೊಳಿಸುತ್ತದೆ, ಅದು ನಿಮ್ಮ ಕ್ಷಮತೆ–ಯನ್ನು ಹೆಚ್ಚಿಸುತ್ತದೆ. ಅದು ಗುಣಮಟ್ಟದಲ್ಲಿ ಹಾಗೂ ಸ್ವರೂಪದಲ್ಲಿ ಶ್ರೇಷ್ಠ ಪರಿಮಾಣ–ವನ್ನು ಒದಗಿಸುತ್ತದೆ, ಅಂತಹದನ್ನು ನೀವೇ ಸ್ವತಃ ದೊರಕಿಸಲಾರಿರಿ. ಗುಣಮಟ್ಟದ ಹಾಗೂ ಸ್ವರೂಪದ ಈ ಹೊಸ ಶ್ರೇಷ್ಠತರ ಪರಿಮಾಣ ನೀವು ಈ ಮೊದಲು ದೊರಕಿಸಬಹುದಾಗಿದ್ದ ಯಾವುದಕ್ಕಿಂತಲೂ ಭಿನ್ನವಾಗಿರುತ್ತದೆ, ನೀವು ಬೇರೆ ಲೋಕವನ್ನೇ ಪ್ರವೇಶಿಸುತ್ತೀರಿ. ಸಮರ್ಪಣೆ ಮಾಡಿಕೊಂಡಿರದಿದ್ದರೆ ನೀವು ಇಂತಹ ವಿಸ್ತಾರದಲ್ಲಿ ಪ್ರವೇಶಮಾಡುವುದು ಶಕ್ಯವಾಗುತ್ತಲೇ ಇರಲಿಲ್ಲ. ಇದು ನೀರಿನ ಹನಿ ಸಮುದ್ರದಲ್ಲಿ ಬಿದ್ದಿರುವಂತಿರುತ್ತದೆ, ಅದು ಅಲ್ಲಿ ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡರೆ ಅದು ನೀರಿನ ಚಿಕ್ಕ ಹನಿಯಾಗಿಯೇ ಉಳಿಯುತ್ತದೆ, ಅದಕ್ಕಿಂತ ಹೆಚ್ಚಿನದೇನಾಗಿರು–ವುದಿಲ್ಲ. ಆ ಚಿಕ್ಕ ಹನಿ ಸುತ್ತಲಿರುವ ಭವ್ಯತೆಯ ತುಳಿತಕ್ಕೊಳಗಾಗುತ್ತದೆ, ಏಕೆಂದರೆ ಅದು ಸಮರ್ಪಣೆ ಮಾಡಿಕೊಂಡಿರುವುದಿಲ್ಲ. ಆದರೆ ಸಮರ್ಪಣೆ ಮಾಡಿಕೊಳ್ಳುವುದರ ಮೂಲಕ, ಅದು ಸಮುದ್ರದೊಡನೆ ಏಕವಾಗುತ್ತದೆ ಮತ್ತು ಇಡೀ ಸಮುದ್ರದ ಸ್ವಭಾವ, ಸಾಮರ್ಥ್ಯ ಮತ್ತು ವಿಸ್ತಾರದಲ್ಲಿ ಭಾಗವಹಿಸುತ್ತದೆ.

ಆ ಚಲನೆಯಲ್ಲಿ ಸಂಧಿಗ್ಧಾರ್ಥತೆಯಾಗಲಿ, ಅಸ್ಪಷ್ಟತೆಯಾಗಲಿ ಇರುವುದಿಲ್ಲ. ಅದು ಸ್ಪಷ್ಟ, ದೃಢ ಹಾಗೂ ನಿಶ್ಚಿತವಾದದ್ದು. ದೈವೀ ವಿಶ್ವಂಭರ ಮನಸ್ಸಿನ ಎದುರು ಮಾನವನ ಚಿಕ್ಕ ಮನಸ್ಸು ನಿಂತಾಗ ಮತ್ತು ತನ್ನ ಪ್ರತ್ಯೇಕತೆಗೆ ಅಂಟಿಕೊಂಡಾಗ ಉಚ್ಚತರ ನೈಜತೆಯನ್ನು ತಿಳಿದುಕೊಳ್ಳಲು ಸಮರ್ಥವಾಗದೆ, ಅದರ ಸಂಪರ್ಕಕ್ಕೂ ಕೂಡ ಬರಲಾಗದೆ ಅದಿದ್ದ ಹಾಗೆ ಉಳಿದುಕೊಳ್ಳುತ್ತದೆ. ಅವೆರಡೂ ದೂರ ಸರಿದು ನಿಂತುಕೊಂಡಿರುವುದನ್ನು ಮುಂದುವರಿಸುತ್ತವೆ ಮತ್ತು ಗುಣಮಟ್ಟದಲ್ಲಿ ಹಾಗೆಯೇ ಸ್ವರೂಪದಲ್ಲಿ ಒಂದರಿಂದ ಇನ್ನೊಂದು ಬಹಳ ಭಿನ್ನವಾಗಿ ಇರುತ್ತವೆ. ಆದರೆ ಮಾನವನ ಚಿಕ್ಕ ಮನಸ್ಸು ಶರಣಾಗತವಾದಾಗ ಅದು ವಿಶ್ವಂಭರ ದೈವೀ ಮನಸ್ಸಿನಲ್ಲಿ

ಮುಳುಗಿ ಹೋಗುತ್ತದೆ, ಗುಣಮಟ್ಟದಲ್ಲಿ ಮತ್ತು ಸ್ವರೂಪದಲ್ಲಿ ಅದರೊಡನೆ ಏಕವಾಗುತ್ತದೆ, ತನ್ನ ಮಿತಿಗಳು ಮತ್ತು ವಿರೂಪಗಳ ಹೊರತಾಗಿ ಬೇರೇನನ್ನೂ ಕಳೆದುಕೊಳ್ಳುವುದಿಲ್ಲ, ದೈವೀ ಮನಸ್ಸಿನ ವೈಶಾಲ್ಯವನ್ನು, ಪ್ರಕಾಶಮಾನವಾದ ಸ್ಪಷ್ಟತೆಯನ್ನು ದೊರಕಿಸುತ್ತದೆ. ಚಿಕ್ಕ ಅಸ್ತಿತ್ವ ತನ್ನ ಸ್ವಭಾವವನ್ನು ಬದಲಿಸುತ್ತದೆ, ತಾನು ಶರಣಾಗತವಾದುದರ ಶ್ರೇಷ್ಠತರ ಸತ್ಯದ ಸ್ವಭಾವವನ್ನು ಧರಿಸುತ್ತದೆ, ಆದರೆ ಅದು ಪ್ರತಿರೋಧ ಒಡ್ಡಿದರೆ, ಇಲ್ಲವೆ ಹೋರಾಟ ಮಾಡಿದರೆ, ವಿಶ್ವಂಭರ ಮನಸ್ಸಿನ ವಿರುದ್ಧ ಬಂಡಾಯವೆದ್ದರೆ ಆಗ ಘರ್ಷಣೆ ಮತ್ತು ಒತ್ತಡಗಳು ಅನಿವಾರ್ಯವಾಗುತ್ತವೆ, ಅವುಗಳಲ್ಲಿ ದುರ್ಬಲವಾದದ್ದು ಮತ್ತು ಚಿಕ್ಕದಾದದ್ದು ಆ ಸಾಮರ್ಥ್ಯ ಹಾಗೂ ಭವ್ಯತೆಗಳ ಎಳೆತಕ್ಕೊಳಗಾಗುವುದನ್ನು ತಪ್ಪಿಸಿಕೊಳ್ಳಲಾಗುವುದಿಲ್ಲ. ಅದು ಶರಣಾಗತ–ವಾಗದಿದ್ದರೆ ಸಾಧ್ಯವಾಗಬಹುದಾದ ಅದರ ಇನ್ನೊಂದು ವಿಧಿ ಲೀನವಾಗುವಿಕೆ ಮತ್ತು ವಿನಾಶಕ್ಕೊಳಗಾಗುವಿಕೆಯಾಗಿರುತ್ತದೆ. ದೈವೀ ಮನಸ್ಸಿನ ಸಂಪರ್ಕಕ್ಕೆ ಬಂದ ಹಾಗೂ ಶರಣಾಗತನಾದ ಮನುಷ್ಯ ತನ್ನದೇ ಮನಸ್ಸು ಕೂಡಲೆ ಪರಿಶುದ್ಧಗೊಳ್ಳಲು ಪ್ರಾರಂಭಿಸುತ್ತಿರುವುದನ್ನು ಮತ್ತು ವಿಶ್ವಂಭರ ದೈವೀ ಮನಸ್ಸಿನ ಸಾಮರ್ಥ್ಯ ಹಾಗೂ ಜ್ಞಾನಗಳಲ್ಲಿ ಪಾಲುಗೊಳ್ಳುತ್ತಿರುವುದನ್ನು ಕಂಡುಕೊಳ್ಳುತ್ತಾನೆ. ಆದರೆ ಅದರ ಎದುರು ಯಾವ ಸಂಪರ್ಕವನ್ನೂ ಪಡೆಯದೆ ಪ್ರತ್ಯೇಕವಾಗಿ ನಿಂತಾಗ ಅಳೆಯಲಾಗದ ವಿಸ್ತಾರದಲ್ಲಿ ಚಿಕ್ಕ ಹನಿಯಾಗಿ ತಾನಿದ್ದ ಹಾಗೆ ಉಳಿದುಕೊಳ್ಳುತ್ತಾನೆ. ಅವನು ಬಂಡಾಯವೆದ್ದರೆ ಹುಚ್ಚನಾಗುತ್ತಾನೆ, ಅವನ ಮನಸ್ಸಿನ ಸಾಮರ್ಥ್ಯಗಳು ಕುಗ್ಗುತ್ತವೆ ಮತ್ತು ಮಾಯ–ವಾಗುತ್ತವೆ. ಮನಸ್ಸನ್ನು ಕುರಿತು ನಿಜವಾದ ವಿಷಯ ಸ್ವಭಾವದ ಇತರ ಭಾಗಗಳಿಗೂ ಅನ್ವಯಿಸುತ್ತದೆ. ಹೆಚ್ಚು ಬಲಿಷ್ಠನಾದವನೊಡನೆ ಹೊಡೆದಾಡಿದಾಗ ತಲೆ ಒಡೆದುಕೊಳ್ಳುವುದನ್ನು ಮಾತ್ರ ಗಳಿಸಿದ ಹಾಗೆ ಆದಿರುತ್ತದೆ. ಲಕ್ಷಪಟ್ಟು ಬಲಿಷ್ಠವಾದುದರ ವಿರುದ್ಧ ನೀವು ಹೊಡೆದಾಡುವುದು ಹೇಗೆ ಸಾಧ್ಯವಾದೀತು? ತನಗಿಂತ ಹೆಚ್ಚು ಬಲಿಷ್ಠನಾದ ಎದುರಾಳಿಯೊಡನೆ ಮುಷ್ಠಿಕಾಳಗದಲ್ಲಿ ತೊಡಗಿಕೊಂಡ ಮನುಷ್ಯ ಹೊಡೆತದ ಮೇಲೆ ಹೊಡೆತ ತಿನ್ನುತ್ತ ದುರ್ಬಲಗೊಂಡು ನೆಲಕಚ್ಚುವ ರೀತಿಯಲ್ಲಿ ಬಂಡಾಯವೆದ್ದ ಪ್ರತಿಸಲ ನೀವು ಒದೆತಕ್ಕೊಳಗಾಗುತ್ತೀರಿ ಮತ್ತು ಪ್ರತಿಯೊಂದು ಹೊಡೆತ ನಿಮ್ಮ ಬಲದ ಒಂದು ಭಾಗವನ್ನು ಕಸಿದುಕೊಂಡು ಹೋಗುತ್ತದೆ. ಸಂಕಲ್ಪ–ದಿಂದ ಕೂಡಿದ ಮಧ್ಯಸ್ಥಿಕೆಯು ಅವಶ್ಯವಿರುವುದಿಲ್ಲ, ಕ್ರಿಯೆ ಸ್ವಯಂಪ್ರೇರಣೆಯಿಂದ ಜರುಗುತ್ತದೆ. ದೈವೀ ಭವ್ಯತೆಯ ಎದುರು ಬಂಡಾಯವೆದ್ದು ಢಿಕ್ಕಿ ಹೊಡೆದಾಗ ಬೇರೇನೂ ಸಂಭವಿಸಲಾರದು. ನಿಮ್ಮ ಮೂಲೆಯಲ್ಲಿ ನೀವಿದ್ದುಕೊಂಡಿರುವಾಗ, ಸಾಮಾನ್ಯ ಜೀವನವನ್ನು ನಡೆಸುತ್ತಿದ್ದಾಗ ನಿಮ್ಮನ್ನು ಸ್ಪರ್ಶಿಸಲಾಗುವುದಿಲ್ಲ, ನೀವು ಗಾಯಗೊಳ್ಳುವುದಿಲ್ಲ. ಆದರೆ ಒಮ್ಮೆ ಭಗವಂತನ ಸಂಪರ್ಕಕ್ಕೆ ಬಂದಾಗ ನಿಮಗೆ ಕೇವಲ ಎರಡು ಮಾರ್ಗಗಳು ತೆರೆದಿರುತ್ತವೆ. ಶರಣಾಗತರಾಗಿ ನೀವು ಭಗವಂತನಲ್ಲಿ



ಮುಳುಗಿ ಹೋಗುವಿರಿ, ನಿಮ್ಮ ಶರಣಾಗತಿ ನಿಮ್ಮನ್ನು ಭವ್ಯವಾಗಿಸುವುದು, ಘನತೆ–ಯುಳ್ಳವರನ್ನಾಗಿ ಮಾಡುವುದು, ಇಲ್ಲವೆ ಬಂಡಾಯವೇಳುವಿರಿ, ಆಗ ನಿಮ್ಮ ಎಲ್ಲ ಸಾಧ್ಯತೆಗಳು ನಾಶವಾಗುವವು ಮತ್ತು ನೀವು ಯಾವುದನ್ನು ವಿರೋಧಿಸುತ್ತೀರೋ ಅದರಲ್ಲಿ ನಿಮ್ಮ ಸಾಮರ್ಥ್ಯಗಳು ಒಳಸೇರುವವು.

ಶರಣಾಗತಿ ಕುರಿತು ಸದ್ಯ ಪ್ರಚಲಿತವಿರುವ ಬಹಳಷ್ಟು ವಿಚಾರಗಳು ತಪ್ಪಾಗಿವೆ. ಬಹಳಷ್ಟು ಜನರು ಶರಣಾಗತಿಯೆಂದರೆ ವ್ಯಕ್ತಿವಿಶಿಷ್ಟತೆಯನ್ನು ಚ್ಯುತಿಗೊಳಿಸುವುದೆಂದು ಭಾವಿಸುತ್ತಾರೆ, ಆದರೆ ಅದು ಬಹುದೊಡ್ಡ ದೋಷ. ಏಕೆಂದರೆ ವ್ಯಕ್ತಿಯು ಭಗವಂತನ ದೈವೀಪ್ರಜ್ಞೆಯ ಒಂದು ಮುಖವನ್ನು ಪ್ರಕಟಿಸಲೆಂದು ಇರುತ್ತಾನೆ. ಮತ್ತು ಅದರ ವಿಶಿಷ್ಟ ಸ್ವಭಾವದ ಅಭಿವ್ಯಕ್ತಿಯು ಅವನ ವ್ಯಕ್ತಿವಿಶಿಷ್ಟತೆಯನ್ನು ಸೃಷ್ಟಿಸುತ್ತದೆ. ಆಗ ಭಗವಂತನೆಡೆಗಿನ ಸರಿಯಾದ ಮನೋಭಾವ ವ್ಯಕ್ತಿವಿಶಿಷ್ಟತೆಯನ್ನು ಬಗ್ಗಿಸುವ, ವಿರೂಪಗೊಳಿಸುವ ನಿಮ್ನತರ ಪ್ರಭಾವಗಳಿಂದ ಮುಕ್ತಗೊಳಿಸುತ್ತದೆ ಮತ್ತು ಅದು ಬಲವತ್ತರವಾಗಿ ವೈಯಕ್ತಿಕವಾದದ್ದು, ಹೆಚ್ಚು ಅದೇ ಆದದ್ದು, ಹೆಚ್ಚು ಪೂರ್ಣವಾದದ್ದು ಆಗುತ್ತದೆ. ವ್ಯಕ್ತಿವಿಶಿಷ್ಟತೆಯ ಸತ್ಯ ಹಾಗೂ ಸಾಮರ್ಥ್ಯಗಳು ಹೆಚ್ಚು ದೇದೀಪ್ಯಮಾನವಾದ ವಿಭಿನ್ನತೆಯಿಂದ ಹೊರಬರುತ್ತವೆ, ಅದರ ಗುಣಲಕ್ಷಣವು ನಿಮ್ನತರವಾದ ಎಲ್ಲ ಮಬ್ಬುತನ, ಅಜ್ಞಾನ, ಎಲ್ಲ ಬಗೆಯ ಕೊಳೆ ಇವುಗಳಿಂದ ಬೆರೆಕೆಗೊಂಡಾಗ ಇರುವು–ದಕ್ಕಿಂತ ಹೆಚ್ಚು ಎದ್ದು ಕಾಣುವಂತಹದಿರುತ್ತದೆ. ಅದು ತೀಕ್ಷ್ಣತೆಯ, ವೈಭವೀಕರಣದ ಅನುಭವ ಪಡೆಯುತ್ತದೆ, ಅದರ ಕ್ಷಮತೆಯಲ್ಲಿ ಹೆಚ್ಚಳವಾಗುತ್ತದೆ, ಅದರ ಸಾಧ್ಯತೆಗಳು ಗರಿಷ್ಠ ಮಿತಿಯಲ್ಲಿ ಸಿದ್ಧಿಯನ್ನು ಕಂಡುಕೊಳ್ಳುತ್ತವೆ. ಆದರೆ ಈ ಬಗೆಯ ಘನವಾದ ಬದಲಾವಣೆಯನ್ನು ತಂದುಕೊಳ್ಳಬೇಕಾದರೆ ಮೊದಲು ಅವನು ನಿಜವಾದ ಸ್ವಭಾವವನ್ನು ವಿರೂಪಗೊಳಿಸುವ, ಮಿತಿಗೊಳಪಡಿಸುವ ಮತ್ತು ಮಬ್ಬಾಗಿಸುವ ಎಲ್ಲವನ್ನೂ, ಹಾಗೆಯೇ ನಿಜವಾದ ವ್ಯಕ್ತಿವಿಶಿಷ್ಟತೆಯನ್ನು ಬಂಧನಕ್ಕೊಳಪಡಿಸುವ, ಕೀಳ್ತರಗತಿಗಿಳಿಸುವ ಮತ್ತು ವಿಕಾರಗೊಳಿಸುವ ಎಲ್ಲವನ್ನೂ ಬಿಟ್ಟುಕೊಡಬೇಕು, ಸಾಮಾನ್ಯ ಮನುಷ್ಯನು ತನ್ನ ಅಜ್ಞಾನದ ನಿಮ್ನತರ ಚಲನೆಗಳನ್ನು ಮತ್ತು ತನ್ನ ಜೀವನದ ಅಂಧ ಕುಂಟುವಿಕೆಯನ್ನು ಚೆಲ್ಲಿಕೊಡಬೇಕು.

ಮೊಟ್ಟಮೊದಲಿಗೆ ಮನುಷ್ಯ ತನ್ನ ಆಸೆಗಳನ್ನು ಬಿಟ್ಟುಕೊಡಬೇಕು, ಏಕೆಂದರೆ ಆಸೆ ನಿಮ್ನ ಸ್ವಭಾವದ ಅತ್ಯಂತ ಮಸುಕಾದ ಹಾಗೂ ಮಸುಕುಗೊಳಿಸುವ ಚಲನೆ–ಯಾಗಿರುತ್ತದೆ. ಆಸೆಗಳು ದೌರ್ಬಲ್ಯದ ಹಾಗೂ ಅಜ್ಞಾನದ ಚಲನೆಗಳು, ಮತ್ತು ಅವು ನಿಮ್ಮನ್ನು ನಿಮ್ಮ ದೌರ್ಬಲ್ಯಕ್ಕೆ ಹಾಗೂ ಅಜ್ಞಾನಕ್ಕೆ ಕಟ್ಟಿಹಾಕುತ್ತವೆ. ಜನರಿಗೆ ಆಸೆಗಳು ಅಂತರಂಗದಲ್ಲಿ ಹುಟ್ಟಿಬರುತ್ತವೆ ಎಂಬ ಅನಿಸಿಕೆ ಇರುತ್ತದೆ, ತಮ್ಮಿಂದಲೇ ಹೊರಬರುತ್ತವೆ ಇಲ್ಲವೆ ತಮ್ಮಲ್ಲೇ ಮೇಲೆದ್ದು ಬರುತ್ತವೆ ಎಂಬ ಭಾವನೆ ಇರುತ್ತದೆ, ಆದರೆ ಅದು ಸತ್ಯವಲ್ಲದ ಅನಿಸಿಕೆ, ಆಸೆಗಳು ನಿಮ್ನ ಸ್ವಭಾವದ, ಮಬ್ಬಾದ ವಿಶಾಲ

ಸಮುದ್ರದ ತೆರೆಗಳಿದ್ದ ಹಾಗೆ, ಅವು ಒಬ್ಬ ಮನುಷ್ಯನಿಂದ ಇನ್ನೊಬ್ಬನತ್ತ ಸಾಗಿ ಹೋಗುತ್ತವೆ. ಜನರು ಆಸೆಯನ್ನು ತಮ್ಮಲ್ಲೇ ಹುಟ್ಟಿಬರುವಂತೆ ಮಾಡುವುದಿಲ್ಲ, ಆದರೆ ಈ ತೆರೆಗಳ ಪ್ರಭಾವಕ್ಕೆ ಒಳಗಾಗಿರುತ್ತಾರೆ, ಯಾರು ಅವುಗಳಿಗೆ ತೆರೆದು–ಕೊಂಡಿರುತ್ತಾರೋ, ಅವುಗಳ ವಿರುದ್ಧ ರಕ್ಷಣೆ ಪಡೆಯದೆ ಇರುತ್ತಾರೋ ಅಂಥವರು ಅವುಗಳಲ್ಲಿ ಸಿಕ್ಕಿಹಾಕಿಕೊಂಡು ಅತ್ತಿತ್ತ ಎಸೆಯಲ್ಪಡುತ್ತಾರೆ, ಆಸೆ ಮನುಷ್ಯನನ್ನು ಮಗ್ನವಾಗಿಸುವುದರ ಹಾಗೂ ವಶವರ್ತಿ ಮಾಡಿಕೊಳ್ಳುವುದರ ಮೂಲಕ ಅವನು ಯಾವುದೇ ವಿವೇಚನೆಯನ್ನು ಮಾಡಲು ಅಶಕ್ತನನ್ನಾಗಿ ಮಾಡುತ್ತದೆ, ಅದು ಅವನ ಸ್ವಭಾವದ ಒಂದು ಭಾಗವಾಗಿದೆಯೇನೋ ಎನ್ನುವ ಭಾವನೆ ತಂದುಕೊಡುತ್ತದೆ. ವಾಸ್ತವದಲ್ಲಿ ಅದರಿಂದ ಅವನ ನಿಜವಾದ ಸ್ವಭಾವಕ್ಕೆ ಏನೂ ಆಗಬೇಕಾಗಿರುವುದಿಲ್ಲ. ನಿಮ್ನತರ ಪ್ರಚೋದನೆಗಳು, ಅಸೂಯೆ, ಮಾತ್ಸರ್ಯ, ದ್ವೇಷ ಇಲ್ಲವೆ ಹಿಂಸೆ ಇವೆಲ್ಲವುಗಳಿಗೂ ಆಸೆಯನ್ನು ಕುರಿತು ಹೇಳಿದ್ದು ಅನ್ವಯಿಸುತ್ತದೆ. ಈ ಚಲನೆಗಳೂ ಕೂಡ ನಿಮ್ಮನ್ನು ಹಿಡಿದುಕೊಳ್ಳುತ್ತವೆ, ನಿಮ್ಮ ಮೇಲೆ ಮುತ್ತಿಗೆ ಹಾಕುವ, ಜಯಸಾಧಿಸುವ ತರಂಗಗಳಾಗಿರುತ್ತವೆ, ಅವು ವಿರೂಪಗೊಳಿಸುತ್ತವೆ, ಅವು ನಿಜವಾದ ಗುಣಲಕ್ಷಣಕ್ಕೆ ಇಲ್ಲವೆ ನಿಜವಾದ ಸ್ವಭಾವಕ್ಕೆ ಸೇರಿರುವುದಿಲ್ಲ, ಅವು ನಿಮ್ಮ ವಾಸ್ತವಿಕ, ಪ್ರತ್ಯೇಕಗೊಳ್ಳದ ಭಾಗಗಳಾಗಿರುವುದಿಲ್ಲ, ಆದರೆ ಸುತ್ತಲಿರುವ ಮಬ್ಬುತನದ ಸಮುದ್ರದಿಂದ ಬರುತ್ತವೆ, ಆ ಸಮುದ್ರದಲ್ಲಿ ನಿಮ್ನತರ ಶಕ್ತಿಗಳು ಸಂಚರಿಸುತ್ತಿರುತ್ತವೆ. ಈ ಆಸೆಗಳಿಗೆ, ಭಾವೋದ್ರೇಕ–ಗಳಿಗೆ ವ್ಯಕ್ತಿವಿಶಿಷ್ಟತೆ ಇರುವುದಿಲ್ಲ, ನಿಮಗೆ ವಿಶಿಷ್ಟವಾದ ಯಾವುದೂ ಅವುಗಳಲ್ಲಿ, ಅವುಗಳ ಕ್ರಿಯೆಯಲ್ಲಿ ಇರುವುದಿಲ್ಲ; ಎಲ್ಲರಲ್ಲಿ ಅವು ಒಂದೇ ಬಗೆಯಲ್ಲಿ ಪ್ರಕಟವಾಗುತ್ತವೆ. ಮನಸ್ಸಿನ ಮಬ್ಬುತನದ ಚಲನೆಗಳೂ ಕೂಡ, ವ್ಯಕ್ತಿವಿಶಿಷ್ಟತೆಯನ್ನು ಮುತ್ತಿಕೊಳ್ಳುವ ಹಾಗೂ ಅದರ ವಿಕಾಸವನ್ನು, ನೆರವೇರಿಕೆಯನ್ನು ಕುಗ್ಗಿಸುವ ಸಂಶಯಗಳು, ದೋಷಗಳು ಮತ್ತು ತೊಂದರೆಗಳು ಅದೇ ಮೂಲದಿಂದ ಬರುತ್ತವೆ, ಅವು ಸಾಗಿ ಹೋಗುವ ತರಂಗಗಳು, ಮತ್ತು ಯಾರು ಅವುಗಳಲ್ಲಿ ಸಿಕ್ಕಿಹಾಕಿಕೊಳ್ಳಲು ಮತ್ತು ಅವು ತಮ್ಮನ್ನು ಅಂಥ ಉಪಕರಣಗಳೆಂದು ಉಪಯೋಗಿಸಿಕೊಳ್ಳುವುದಕ್ಕೆ ಅನುವು ಮಾಡಿಕೊಡಲು ತಯಾರಿರುವರೋ ಅಂಥವರನ್ನು ಹಿಡಿದುಕೊಳ್ಳುತ್ತವೆ. ಹಾಗಿದ್ದರೂ ಈ ಚಲನೆಗಳು ತನ್ನದೇ ಭಾಗಗಳೆಂದು ಮತ್ತು ತನ್ನದೇ ಮುಕ್ತ ವ್ಯಕ್ತಿವಿಶಿಷ್ಟತೆಯ ಮೌಲ್ಯವುಳ್ಳ ಉತ್ಪಾದನೆಗಳೆಂದು ಪ್ರತಿಯೊಬ್ಬನೂ ನಂಬುತ್ತಲೇ ಇರುತ್ತಾನೆ. ಅವು ಉಂಟು ಮಾಡುವ ಅಶಕ್ತಿಗಳು ತಮ್ಮ ಸ್ವಾತಂತ್ರ್ಯವೆಂದು ಕರೆಯುವುದರ ಕುರುಹು–ಗಳೆಂದು, ಸಾರವೆಂದು ಅವುಗಳಿಗೆ ಅಂಟಿಕೊಳ್ಳುವ ಜನರನ್ನೂ ಕೂಡ ನಾವು ಕಾಣಬಹುದು.

**–ಶ್ರೀಮಾತೆ**

*



## ಆಧ್ಯಾತ್ಮಿಕತೆ ಹಾಗೂ ನೈತಿಕತೆ ಇವುಗಳ ನಡುವಿರುವ ಭೇದ

(3/117–20) ನೀವು ಇದನ್ನು[1] ಅರ್ಥ ಮಾಡಿಕೊಂಡಿದ್ದರೆ, ಆಧ್ಯಾತ್ಮಿಕತೆ ಮತ್ತು ನೈತಿಕತೆ ಇವುಗಳ ನಡುವಿರುವ ದೊಡ್ಡ ಭೇದವನ್ನು ಅರಿತುಕೊಳ್ಳಲು ಸಿದ್ಧರಾಗುವಿರಿ, ಇವೆರಡೂ ವಿಷಯಗಳನ್ನು ಕುರಿತು ಜನರು ಸತತ ಗೊಂದಲಕ್ಕೀಡಾಗುತ್ತಾರೆ, ಆಧ್ಯಾತ್ಮಿಕ ಇಲ್ಲವೆ ಯೌಗಿಕ ಜೀವನದ ಗುರಿ ದೈವೀ ಪ್ರಜ್ಞೆಯಲ್ಲಿ ಬೆಳೆಯುವುದಾಗಿದೆ ಮತ್ತು ಅದರ ಪರಿಣಾಮವೆಂದಾಗಿ ನಿಮ್ಮಲ್ಲಿರುವುದನ್ನು ಪರಿಶುದ್ಧಗೊಳಿಸುವುದು, ಗಾಢವಾಗಿಸುವುದು, ವೈಭವೀಕರಿಸುವುದು ಮತ್ತು ಪರಿಪೂರ್ಣಗೊಳಿಸುವುದು ಸಾಧ್ಯವಾಗುವಂತೆ ಮಾಡುವುದಾಗಿದೆ. ಅದು ಭಗವಂತನನ್ನು ಪ್ರಕಟಿಸುವುದು ನಿಮಗೆ ಸಾಧ್ಯವಾಗುವಂತೆ ಮಾಡುತ್ತದೆ, ಪ್ರತಿಯೊಂದು ವ್ಯಕ್ತಿವಿಶಿಷ್ಟತೆಯ ಗುಣಲಕ್ಷಣ ಸಂಪೂರ್ಣ ಮೌಲ್ಯಪಡೆಯುವಂತೆ ಅದು ಉನ್ನತಗೊಳಿಸುತ್ತದೆ ಮತ್ತು ಅದನ್ನು ಗರಿಷ್ಠ ಅಭಿವ್ಯಕ್ತಿಯತ್ತ ತಂದು ನಿಲ್ಲಿಸುತ್ತದೆ, ಏಕೆಂದರೆ ಇದು ಭಗವಂತನ ಯೋಜನೆಯ ಭಾಗವಾಗಿದೆ, ಯಾವುದು ಒಳ್ಳೆಯದು, ಯಾವುದು ಒಳ್ಳೆಯದಲ್ಲ ಎಂಬ ಕೆಲವು ವಿಚಾರಗಳಿರುವ ಮಾನಸಿಕ ರಚನೆಯಿಂದ ನೈತಿಕತೆ ಮುಂದುವರಿಯುತ್ತದೆ, ಅದು ಒಂದು ಆದರ್ಶ ಮಾದರಿಯನ್ನು ಮುಂದಿರಿಸುತ್ತದೆ, ಎಲ್ಲರೂ ಅದನ್ನು ಅನುಸರಿಸಬೇಕಾಗುತ್ತದೆ. ಭಿನ್ನ ಭಿನ್ನ ಕಾಲ ದೇಶಗಳಲ್ಲಿ ನೈತಿಕತೆಯ ಆದರ್ಶ, ಅದರ ಅಂಶಗಳಲ್ಲಿ ಹಾಗೂ ಮೊತ್ತದಲ್ಲಿ ಭಿನ್ನರೀತಿಯದಾಗಿರುತ್ತದೆ. ಆದಾಗ್ಯೂ ಅದೇ ಅನನ್ಯ ಮಾದರಿಯದಾಗಿದ್ದು, ಮೂಲತತ್ವದಲ್ಲಿ ಪರಿಪೂರ್ಣವಾದದ್ದು ಎಂದು ಸಾರಿ ಹೇಳಲಾಗುತ್ತದೆ, ಅದಕ್ಕೆ ಹೊರತಾದುದಕ್ಕೆ ಅದರಲ್ಲಿ ಪ್ರವೇಶವಿರುವುದಿಲ್ಲ, ತನ್ನಲ್ಲಿರುವುದರಲ್ಲಿಯೂ ಬದಲಾವಣೆಯನ್ನು ಒಪ್ಪಿಕೊಳ್ಳುವುದಿಲ್ಲ, ಅದರ ಏಕೈಕ ಆದರ್ಶದ ಮೇಲ್ಪಂಕ್ತಿಗೆ ಎಲ್ಲರೂ ಎರಕಗೊಳ್ಳಬೇಕು. ಪ್ರತಿಯೊಬ್ಬನೂ ಏಕಪ್ರಕಾರವಾಗಿ, ದೋಷರಹಿತವಾಗಿ ಒಂದೇ ರೀತಿಯವನಾಗಬೇಕಾಗುತ್ತದೆ. ನೈತಿಕತೆ ಈ ಬಗೆಯ ಕಟ್ಟುನಿಟ್ಟಿನ, ನೈಜವಲ್ಲದ ಸ್ವಬಾವದ್ದಾಗಿರುವುದರಿಂದ, ಅದರ ತತ್ವದಲ್ಲಿ ಹಾಗೂ ಕಾರ್ಯಗತಿಯಲ್ಲಿ ಆಧ್ಯಾತ್ಮಿಕ ಜೀವನಕ್ಕೆ ವಿರುದ್ಧವಾಗಿರುತ್ತದೆ. ಆಧ್ಯಾತ್ಮಿಕ ಜೀವನವು ಎಲ್ಲರಲ್ಲಿರುವ ಒಂದು ಸಾರವನ್ನು ತೆರೆದು ತೋರಿಸುತ್ತದೆ, ಹಾಗೆಯೇ ಅದರ ಅನಂತ ವೈವಿಧ್ಯವನ್ನೂ ಕೂಡ ತೆರೆದು ತೋರಿಸುತ್ತದೆ, ಅದು ಏಕವಾದುದರಲ್ಲಿ ವೈವಿಧ್ಯಕ್ಕಾಗಿ ಮತ್ತು ಆ ವೈವಿಧ್ಯದ ಪರಿಪೂರ್ಣತೆಗಾಗಿ ಕಾರ್ಯಮಾಡುತ್ತದೆ. ನೈತಿಕತೆ ಒಂದು ಕೃತ್ರಿಮ ಮಾನದಂಡವನ್ನು ಎತ್ತಿಹಿಡಿಯುತ್ತದೆ, ಅದು ಜೀವನದ ವೈವಿಧ್ಯಕ್ಕೆ ಹಾಗೂ ಆತ್ಮದ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿರುತ್ತದೆ; ಮಾನಸಿಕವಾದ, ಸ್ಥಿರಗೊಂಡ, ಸೀಮಿತವಾದ ಏನನ್ನೋ

1. ಅಂದರೆ 'ಸಮುದ್ರದಲ್ಲಿರುವ ನೀರಿನ ಚಿಕ್ಕ ಹನಿಯಂತೆ ಉಳಿದುಕೊಳ್ಳಬೇಡಿರಿ' ಎಂಬ ಲೇಖನವನ್ನು

ಸೃಷ್ಟಿಸಿ ಎಲ್ಲರೂ ಅದಕ್ಕೆ ಅನುರೂಪವಾಗಿರಲಿ ಎಂದು ಬೇಡುತ್ತದೆ. ಎಲ್ಲರೂ ಒಂದೇ ಬಗೆಯ ಗುಣಲಕ್ಷಣಗಳನ್ನು ಹಾಗೂ ಆದರ್ಶ ಸ್ವಭಾವವನ್ನು ದೊರಕಿಸಲು ಶ್ರಮಿಸಬೇಕು. ನೈತಿಕತೆ ದೈವಿಕವಾದದ್ದಲ್ಲ, ಭಗವಂತನಿಗೆ ಸೇರಿದ್ದೂ ಅಲ್ಲ, ಅದು ಮನುಷ್ಯನದು, ಮಾನವ ಕುಲಕ್ಕೆ ಸೇರಿದ್ದು, ಒಳ್ಳೆಯದು ಮತ್ತು ಕೆಟ್ಟದ್ದು ಇವುಗಳ ನಡುವಿನ ಸ್ಥಿರಗೊಂಡ ವಿಭಜನೆಯನ್ನು ಮೂಲ ಅಂಶವೆಂದು ನೈತಿಕತೆ ಕೈಗೆತ್ತಿಕೊಳ್ಳುತ್ತದೆ, ಆದರೆ ಇದು ಮನಸ್ಸಿಗೆ ಬಂದಂತೆ, ಸ್ವೇಚ್ಛೆಯಿಂದ ಆಯ್ದುಕೊಂಡ ವಿಚಾರ, ಅದು ಸಾಪೇಕ್ಷವಾದ ವಿಷಯಗಳನ್ನು ಕೈಗೆತ್ತಿಕೊಂಡು ಅವು ಪರಿಪೂರ್ಣ–ವೆಂದು ಹೇರಲು ಪ್ರಯತ್ನಿಸುತ್ತದೆ, ಏಕೆಂದರೆ ಈ ಒಳ್ಳೆಯದು ಮತ್ತು ಈ ಕೆಟ್ಟದ್ದು ಬೇರೆ, ಬೇರೆ ಹವಾಮಾನಗಳಲ್ಲಿ, ಕಾಲಗಳಲ್ಲಿ, ಯುಗಗಳಲ್ಲಿ ಮತ್ತು ಬೇರೆ, ಬೇರೆ ದೇಶಗಳಲ್ಲಿ ಭಿನ್ನವಾಗಿರುತ್ತದೆ: ಒಳ್ಳೆಯ ಆಸೆಗಳಿವೆ, ಕೆಟ್ಟ ಆಸೆಗಳಿವೆ ಎಂದು ಹೇಳುವ ಮಟ್ಟಕ್ಕೂ ನೈತಿಕ ವಿಚಾರ ಸಾಗುತ್ತದೆ ಮತ್ತು ಅವುಗಳಲ್ಲಿ ಒಂದನ್ನು ಆಯ್ದುಕೊಳ್ಳಿರಿ ಇನ್ನೊಂದನ್ನು ತ್ಯಜಿಸಿರಿ ಎಂದು ಹೇಳುತ್ತದೆ. ಒಟ್ಟಿನಲ್ಲಿ ನೀವು ದೂರವಿರಿಸುವ ಎಲ್ಲವನ್ನು ಆಚೆಗೆ ಎಸೆದುಬಿಡಬೇಕೆಂಬುದು ಅದರ ನಿಯಮ. ಅವು ತಮ್ಮಲ್ಲಿಯೇ ಕೆಟ್ಟದ್ದಾಗಿವೆಯೆಂದು ಅವುಗಳನ್ನು ತ್ಯಜಿಸುವುದಲ್ಲ – ಏಕೆಂದರೆ ಅವು ಇನ್ನೊಬ್ಬ ಮನುಷ್ಯನಿಗೆ, ಇಲ್ಲವೆ ಇನ್ನೊಂದು ವಲಯದಲ್ಲಿ ಒಳ್ಳೆಯವಾಗಿರಬಹುದು, ಆದರೆ ಅವು ಪ್ರಕಾಶರಹಿತವಾದ, ಅಜ್ಞಾನದ ಪ್ರಚೋದನೆಗಳಿಗೆ ಹಾಗೂ ಶಕ್ತಿಗಳಿಗೆ ಸೇರಿರುತ್ತವೆ ಎಂಬ ಕಾರಣದಿಂದ ಮತ್ತು ಭಗವಂತನನ್ನು ಸಮೀಪಿಸುವ ದಾರಿಯಲ್ಲಿ ಅಡ್ಡ ನಿಲ್ಲುತ್ತವೆ ಎಂಬ ಕಾರಣದಿಂದ ಅವುಗಳನ್ನು ತ್ಯಜಿಸಬೇಕು. ಎಲ್ಲ ಆಸೆಗಳು, ಅವು ಒಳ್ಳೆಯವಾಗಿರಲಿ, ಒಳ್ಳೆಯವಾಗಿರದೆ ಇರಲಿ, ಇಲ್ಲಿ ಕೊಟ್ಟ ವರ್ಣನೆಯಡಿಯಲ್ಲಿ ಬರುತ್ತವೆ. ಏಕೆಂದರೆ ಆಸೆಯೇ ಸ್ವತಃ ಪ್ರಕಾಶರಹಿತವಾದ ಪ್ರಾಣಿಕ ಸತ್ತೆಯಿಂದ ಹಾಗೂ ಅದರ ಅಜ್ಞಾನದಿಂದ ಬರುತ್ತದೆ. ಇನ್ನೊಂದೆಡೆಗೆ ನಮ್ಮನ್ನು ಭಗವಂತನ ಸಂಪರ್ಕದಲ್ಲಿ ತರುವ ಎಲ್ಲ ಚಲನೆಗಳನ್ನು ಸ್ವೀಕರಿಸಬೇಕು. ಅವು ತಮ್ಮಲ್ಲಿಯೇ ಒಳ್ಳೆಯವೆಂದು ನೀವು ಅವುಗಳನ್ನು ಸ್ವೀಕರಿಸುವುದಿಲ್ಲ, ಆದರೆ ಅವು ನಿಮ್ಮನ್ನು ಭಗವಂತನ ಸಮೀಪಕ್ಕೆ ತರುತ್ತವೆ ಎಂಬ ಕಾರಣದಿಂದ ಸ್ವೀಕರಿಸುತ್ತೀರಿ, ಅವನಿಂದ ದೂರ ಕೊಂಡೊಯ್ಯುವವುಗಳನ್ನು ತಿರಸ್ಕರಿಸುತ್ತೀರಿ. ಆದರೆ ಇದು ಒಳ್ಳೆಯದು, ಅದು ಒಳ್ಳೆಯದಲ್ಲ ಎಂದು ಹೇಳಬೇಡಿರಿ. ಮತ್ತು ನಿಮ್ಮ ಅನಿಸಿಕೆಯನ್ನು ಇತರರ ಮೇಲೆ ಹೇರಬೇಡಿರಿ, ಏಕೆಂದರೆ ನಿಮಗೆ ಯಾವುದು ಒಳ್ಳೆಯದಲ್ಲವೆನಿಸುವುದೋ ಅದು ಭಗವಂತನನ್ನು ಸಿದ್ಧಿಸಿಕೊಳ್ಳಲು ಬಯಸದ ನಿಮ್ಮ ನೆರೆಹೊರೆಯ ಮನುಷ್ಯನಿಗೆ ಒಳ್ಳೆಯದಾಗಿರಬಹುದು.



ವಿಷಯಗಳನ್ನು ಕುರಿತು ಆಧ್ಯಾತ್ಮಿಕ ಹಾಗು ನೈತಿಕ ದೃಷ್ಟಿಕೋನ ಇವುಗಳ ನಡುವಿರುವ ವ್ಯತ್ಯಾಸವನ್ನು ತಿಳಿಯಲು ಒಂದು ಉದಾಹರಣೆಯನ್ನು ತೆಗೆದು–ಕೊಳ್ಳೋಣ. ಸಾಮಾನ್ಯ ಸಾಮಾಜಿಕ ವಿಚಾರಗಳ ಪ್ರಕಾರ ಉದಾರ ಮನಸ್ಸಿನ ಜನರು ಮತ್ತು ಧನದಾಹವುಳ್ಳವರು ಎಂಬ ಎರಡು ವರ್ಗದ ಜನರಿದ್ದಾರೆ. ಧನದಾಹವುಳ್ಳ ಮನುಷ್ಯನನ್ನು ಹೀಗಳೆಯಲಾಗುತ್ತದೆ ಮತ್ತು ದೂಷಿಸಲಾಗುತ್ತದೆ, ಅದು ಹಾಗಿರುವಾಗ ಉದಾರ ಮನುಷ್ಯನನ್ನು ನಿಸ್ವಾರ್ಥಿ, ಸಮಾಜಕ್ಕೆ ಉಪಯುಕ್ತನಾದವನು ಎಂದು ಪರಿಗಣಿಸಲಾಗುತ್ತದೆ ಮತ್ತು ಅವನನ್ನು ಅವನ ಸದ್ಗುಣಕ್ಕಾಗಿ ಹೊಗಳಲಾಗುತ್ತದೆ. ಆದರೆ ಆಧ್ಯಾತ್ಮಿಕ ದೃಷ್ಟಿಯಲ್ಲಿ ಅವರಿಬ್ಬರೂ ಒಂದೇ ಸ್ತರದಲ್ಲಿರುತ್ತಾರೆ; ಒಬ್ಬನ ಔದಾರ್ಯ, ಇನ್ನೊಬ್ಬನ ಧನದಾಹ ಇವು ಉಚ್ಚತರ ಸತ್ಯದ, ಶ್ರೇಷ್ಠತರ ದೈವೀ ಸಾಮರ್ಥ್ಯದ ವಿರೂಪಗೊಂಡ ಸ್ಥಿತಿಗಳಾಗಿರುತ್ತವೆ. ಒಂದು ಸಾಮರ್ಥ್ಯವಿದೆ, ದೈವೀ ಚಲನೆಯಿದೆ, ಅದು ಹರಡಿಕೊಳ್ಳುತ್ತದೆ, ಪ್ರಸರಿಸುತ್ತದೆ, ಅದು ಶಕ್ತಿಗಳನ್ನು ಮತ್ತು ವಿಷಯಗಳನ್ನು, ಮತ್ತು ಅತ್ಯಂತ ಪ್ರಾಪಂಚಿಕ ಸ್ತರದಿಂದ ಹಿಡಿದು ಅತ್ಯಂತ ಆಧ್ಯಾತ್ಮಿಕವಾದ ಸ್ವಭಾವದ ಎಲ್ಲ ಸ್ತರಗಳಲ್ಲಿ ಬೇರೆ ಏನನ್ನು ವಶದಲ್ಲಿಟ್ಟುಕೊಂಡಿರುತ್ತದೋ ಅದನ್ನು ಚೆಲ್ಲಿಕೊಡುತ್ತದೆ. ಉದಾರ ಮನುಷ್ಯ ಹಾಗೂ ಅವನ ಔದಾರ್ಯದ ಹಿಂದೆ ಒಂದು ಆತ್ಮದ ಮಾದರಿ ಇರುತ್ತದೆ, ಅದು ಈ ಚಲನೆಯನ್ನು ಅಭಿವ್ಯಕ್ತಗೊಳಿಸುತ್ತದೆ; ಅವನು ಪ್ರಸರಿಸುವುದಕ್ಕಾಗಿ, ವಿಸ್ತಾರವಾಗಿ ಹಂಚುವುದಕ್ಕಾಗಿ ಒಂದು ಉಪಕರಣವಾಗಿರುತ್ತಾನೆ. ಮತ್ತೊಂದು ಸಾಮರ್ಥ್ಯ ಮತ್ತು ದೈವೀ ಚಲನೆಯಿದೆ, ಅದು ಸಂಗ್ರಹಿಸುತ್ತದೆ ಮತ್ತು ಒಟ್ಟಿಗಿರಿಸುತ್ತದೆ. ಅದು ವಸ್ತುವಿಷಯಗಳನ್ನು, ಶಕ್ತಿಗಳನ್ನು ಹಾಗೂ ವಶವರ್ತಿ ಮಾಡಿಕೊಳ್ಳಲು ಸಾಧ್ಯವಿರುವ ಎಲ್ಲವನ್ನು – ಅವು ನಿಮ್ನ ಸ್ತರಕ್ಕೆ ಸೇರಿರಲಿ ಇಲ್ಲವೆ ಉಚ್ಚತರ ಸ್ತರಗಳಿಗೆ ಸೇರಿರಲಿ – ಒಟ್ಟುಗೂಡಿಸುತ್ತದೆ, ನೀವು ಧನದಾಹಿ ಎಂದು ಆರೋಪಿಸುವ ಮನುಷ್ಯ ಈ ಚಲನೆಗಾಗಿರಲಿ ಎಂಬ ಉದ್ದೇಶವಿತ್ತು. ಇವೆರಡೂ ಚಲನೆಗಳು ಮಹತ್ವದ್ದಾಗಿವೆ, ಇಡೀ ಯೋಜನೆಯಲ್ಲಿ ಇವೆರಡೂ ಅವಶ್ಯವಾಗಿವೆ. ಶೇಖರಿಸುವ ಮತ್ತು ಏಕತ್ರಗೊಳಿಸುವ ಚಲನೆ ಹರಡುವ ಮತ್ತು ಪ್ರಸರಿಸುವ ಚಲನೆಗಿಂತ ಕಡಿಮೆ ಮಹತ್ವದ್ದೇನಲ್ಲ. ನಿಜವಾಗಿ ಇವೆರಡೂ ಭಗವಂತನಿಗೆ ಅರ್ಪಿಸಿಕೊಂಡ ಚಲನೆಗಳಾದರೆ, ಒಂದೇ ಮಟ್ಟದಲ್ಲಿ, ಸಮವಾದ ಮೌಲ್ಯಗಳನ್ನು ಹೊಂದಿ ದೈವೀಕಾರ್ಯದ ಉಪಯೋಗಕ್ಕೆ ಬರುತ್ತವೆ. ಆದರೆ ಭಗವಂತನಿಗೆ ಅರ್ಪಿಸಿಕೊಳ್ಳದೆ ಇದ್ದಾಗ ಅವೆರಡೂ ಚಲನೆಗಳು ಒಂದೇ ರೀತಿಯಲ್ಲಿ ಅಜ್ಞಾನದ ಪ್ರಚೋದನೆಗಳಿಂದ ಬಂದಿರುತ್ತವೆ. ಒಬ್ಬ ಚೆಲ್ಲಿಕೊಡುವ ಪ್ರೇರಣೆಗೊಳಗಾದರೆ, ಇನ್ನೊಬ್ಬ ಹಿಂದೆ ಹಿಡಿದಿಟ್ಟುಕೊಳ್ಳುವ ಪ್ರೇರಣೆಗೆ ಒಳಗಾಗಿರುತ್ತಾನೆ. ಇವರಿಬ್ಬರ

ನಡುವೆ ಆಯ್ದುಕೊಳ್ಳುವುದಕ್ಕೆ ಹೆಚ್ಚಿನ ಆದ್ಯತೆ ಕಂಡುಕೊಳ್ಳಲಾಗುವುದಿಲ್ಲ. ಯೋಗದ ಉಚ್ಚತರ ದೃಷ್ಟಿಕೋನದಿಂದ ಬಹಳ ಹೊಗಳಿಕೆಗೆ ಪಾತ್ರನಾದ ಉದಾರ ಮನುಷ್ಯನಿಗೆ "ಔದಾರ್ಯದ ನಿನ್ನ ಎಲ್ಲ ಪ್ರಚೋದನೆಗಳು ಆತ್ಮದ ಮೌಲ್ಯದ ದೃಷ್ಟಿಯಲ್ಲಿ ಏನೂ ಅಲ್ಲ, ಏಕೆಂದರೆ ಅವು ಅಹಂಕಾರದಿಂದ ಮತ್ತು ಅಜ್ಞಾನದಿಂದ ಕೂಡಿದ ಆಸೆಯಿಂದ ಬರುತ್ತದೆ" ಎಂದು ಹೇಳಬಹುದು. ಇನ್ನೊಂದೆಡೆಗೆ ಧನದಾಹಿಗಳೆಂದು ದೂಷಿಸಲಾದ ಜನರ ಮಧ್ಯದಲ್ಲಿ ಕೆಲವೊಮ್ಮೆ ಅಚಂಚಲನಾಗಿ, ಏಕಾಗ್ರತೆಯುಳ್ಳ ನಿರ್ಧಾರದಿಂದ ಸಂಗ್ರಹಿಸಿಡುತ್ತಿರುವ, ಹೆಚ್ಚು ಮೊತ್ತದಲ್ಲಿ ಕಾದಿಟ್ಟುಕೊಂಡಿರುವ ಮನುಷ್ಯನನ್ನು ನೀವು ನೋಡಬಹುದು, ಅದನ್ನು ಅವನ ಸ್ವಭಾವ ಅವನಿಗೆ ವಹಿಸಿಕೊಟ್ಟಿರುತ್ತದೆ. ಇಂತಹ ಮನುಷ್ಯ ಒಮ್ಮೆ ಎಚ್ಚತ್ತುಕೊಂಡರೆ ಭಗವಂತನ ಒಳ್ಳೆಯ ಉಪಕರಣವಾಗುವನು. ಸಾಮಾನ್ಯವಾಗಿ ಧನದಾಹವುಳ್ಳ ಮನುಷ್ಯ, ಉದಾರ ಮನುಷ್ಯ ಮಾಡುವ ಹಾಗೆ, ಅಹಂಕಾರದಿಂದ, ಆಸೆಯಿಂದ ಕಾರ್ಯ ಮಾಡುತ್ತಾನೆ, ಅದು ಅದೇ ಅಜ್ಞಾನದ ಇನ್ನೊಂದು ತುದಿಯಾಗಿರುತ್ತದೆ. ಉಚ್ಚತರವಾದ ಏನನ್ನೋ ಸಂಪರ್ಕಿಸಲು ಇವರೀರ್ವರೂ ತಮ್ಮನ್ನು ಪರಿಶುದ್ಧಗೊಳಿಸಬೇಕಾಗುತ್ತದೆ, ಬದಲಾಗಬೇಕಾಗುತ್ತದೆ, ಈ ಉಚ್ಚತರವಾದದ್ದು ಅವರ ಹಿಂದೆಯೇ ಇರುತ್ತದೆ, ಅದನ್ನು ಅವರು ತಮ್ಮ ಸ್ವಭಾವ ಕರೆಕೊಟ್ಟ ರೀತಿಯಲ್ಲಿ ಅಭಿವ್ಯಕ್ತಪಡಿಸಬೇಕಾಗುತ್ತದೆ.

ಅದೇ ರೀತಿಯಲ್ಲಿ ಉಳಿದ ಮಾದರಿ ಜನರನ್ನು ಗಮನಿಸಬೇಕು ಮತ್ತು ಅವರು ಭಗವಂತನಲ್ಲಿರುವ ಯಾವುದೋ ಮೂಲ ಉದ್ದೇಶಕ್ಕಾಗಿ ಇರುವರೆಂಬುದನ್ನು ಗುರುತಿಸಬೇಕು. ಪ್ರತಿಯೊಂದು ಮಾದರಿಯು ಭಗವಂತನು ಉದ್ದೇಶಿಸಿರುವ ಮಾದರಿಯ ಕುಗ್ಗಿದ ರೂಪ ಇಲ್ಲವೆ ಅಣಕು ಚಿತ್ರವಾಗಿರುತ್ತದೆ. ಶ್ರೇಷ್ಠತರ ಆಧ್ಯಾತ್ಮಿಕ ಮೌಲ್ಯವುಳ್ಳ ವಿಷಯಗಳನ್ನು ಮಾನಸಿಕವಾಗಿ, ಪ್ರಾಣಿಕವಾಗಿ ವಿರೂಪಗೊಳಿಸ-ಲಾಗಿರುತ್ತದೆ. ವಿರೂಪಗೊಳಿಸುವುದನ್ನು, ಅಣಕು ಚಿತ್ರವನ್ನು ತಪ್ಪು ಚಲನೆ ಸೃಷ್ಟಿಸುತ್ತದೆ. ಒಮ್ಮೆ ಮಿಥ್ಯಾರೂಪದ ಪ್ರಚೋದನೆಯ ಮೇಲೆ ಪ್ರಭುತ್ವ ಪಡೆದರೆ, ಸರಿಯಾದ ಮನೋಭಾವ ತಳೆದರೆ, ಸರಿಯಾದ ಚಲನೆಯನ್ನು ಕಂಡುಕೊಂಡರೆ ಎಲ್ಲವೂ ತಮ್ಮ ದೈವೀ ಮೌಲ್ಯಗಳನ್ನು ತೆರೆದು ತೋರಿಸುವವು. ಎಲ್ಲರೂ ತಮ್ಮಲ್ಲಿರುವ ಸತ್ಯದಿಂದಾಗಿ ಸಮರ್ಥನೀಯರಾಗಿದ್ದಾರೆ, ಮಹತ್ವವುಳ್ಳವರಾಗಿದ್ದಾರೆ, ಸಮನಾಗಿ ಅವಶ್ಯವಾಗಿದ್ದಾರೆ, ಅವರು ಭಿನ್ನರಾಗಿದ್ದಾರೆ, ಆದರೆ ಭಗವಂತನ ಪ್ರಕಟಣೆಯ ಅನಿವಾರ್ಯವಾದ ಉಪಕರಣಗಳಾಗಿದ್ದಾರೆ.

**– ಶ್ರೀಮಾತೆ**

*



## ಯಾರು? (ಕವಿತೆ)

ಆಕಾಶದ ನೀಲಿಯಲಿ, ಕಾಡಿನ ಹಸಿರಿನಲಿ
ಹೊಳಪು ನೀಡುವ ಬಣ್ಣ ಬಳೆದ ಹಸ್ತ ಯಾರದಿಹುದು?
ಆಕಾಶದ್ರವ್ಯದ ಗರ್ಭದಲಿ ಗಾಳಿಗಳು ನಿದ್ರಿಸುತ್ತಿರುವಾಗ
ಅವುಗಳನೆಚ್ಚರಿಸಿ ಬೀಸಲು ಆಜ್ಞೆಯಿತ್ತವರು ಯಾರು?

ಹೃದಯದಲಿ, ಪ್ರಕೃತಿಯ ಗುಹೆಯಲಿ ಕಳೆದು ಹೋದವನು
ಯೋಚನೆಯ ನಿರ್ಮಿಸುವ ಅವನು ಮಿದುಳಿನಲಿ ಗೋಚರಿಸುವನು
ಹೂವುಗಳ ನಮೂನೆಯಲಿ, ಅರಳುವಿಕೆಯಲಿ ಅವನು ನೇಯ್ದುಕೊಂಡಿಹನು
ತಾರೆಗಳ ಪ್ರಕಾಶಮಯ ಜಾಲದಲಿ ಅವನು ಸಿಕ್ಕಿಕೊಂಡಿಹನು.

ಪುರುಷನ ಬಲದಲಿ, ಸ್ತ್ರೀಯ ಲಾವಣ್ಯದಲಿ
ಬಾಲಕನ ನಗುವಿನಲಿ, ಬಾಲಿಕಯ ನಾಚಿಕೆಯ ಕೆಂಪಿನಲಿ
ತನ್ನ ಮೈಸುತ್ತ ತಿರುಗುವ ಗುರುಗ್ರಹವ ಆಕಾಶದಲ್ಲಿ ಕಳುಹಿಸಿದ ಕೈ
ತನ್ನೆಲ್ಲ ನೈಪುಣ್ಯವನು ಕುರುಳ ರೂಪಿಸಲು ವ್ಯಯಿಸುತಲಿಹುದು.

ಇವು ಅವನ ಕಾರ್ಯಗಳು, ಅವನ ಆವರಣಗಳು, ಛಾಯೆಗಳು
ಆದರವನು ಇರುವುದು ಎಲ್ಲಿ, ಅವನಾವ ಹೆಸರಿನಲಿ ಪರಿಚಿತನು
ಬ್ರಹ್ಮನೇ, ವಿಷ್ಣುವೇ ಆತ, ಪುರುಷನೇ, ಸ್ತ್ರೀಯೇ?
ದೇಹಧಾರಿಯೆ, ದೇಹರಹಿತನೆ? ಯಮಳನೇ, ಏಕನೇ?

ಶ್ಯಾಮಸುಂದರ ಬಾಲಕನೊಬ್ಬ ನಮ್ಮ ಪ್ರೇಮಪಾತ್ರನಾಗಿಹನು
ನಗ್ನಭಯಂಕರಿ ಸ್ತ್ರೀಯೊಬ್ಬಳು ನಮ್ಮ ಸ್ವಾಮಿನಿಯಾಗಿಹಳು
ಪರ್ವತಗಳ ಹಿಮದಲಿ ಮೋಜು ಮಾಡುವ ಅವನ ನಾವು ನೋಡಿಹೆವು
ಲೋಕಗಳ ಹೃದಯದಲಿ ಕಾರ್ಯನಿರತನಾಗಿಹ ಅವನ ನಾವು ಕಂಡಿರುವೆವು.

ಅವನ ಕಪಟತನವ ಕುರಿತು ಅವನ ರೀತಿಗಳ ಬಗೆಗೆ ಜಗಕೆಲ್ಲ ಹೇಳುವೆವು
ಯಾತನೆಯ ಅತ್ಯಾನಂದ, ಭಾವೋದ್ರೇಕ ನೋವು ಅವನಲ್ಲುಂಟು
ನಮ್ಮ ದುಃಖಗಳಲಿ ಅವನು ನಲಿಯುವನು ನಾವಳುವ ಹಾಗೆ ಮಾಡುವನು
ಆಗ ತನ್ನ ಆನಂದ ಚೆಲುವುಗಳೊಡನೆ ಮತ್ತೆ ನಮ್ಮನು ಮರುಳು ಮಾಡುವನು.

ಸಂಗೀತವೆಲ್ಲ ಕೇವಲ ಅವನ ನಗುವಿನ ದನಿಯು
ಸೌಂದರ್ಯವೆಲ್ಲ ಅವನ ಭಾವೋದ್ದೀಪ್ತ ಸಂತಸದ ಮಂದಹಾಸ

ನಮ್ಮ ಜೀವಿತಗಳೆಲ್ಲ ಅವನ ಹೃದಯದ ಬಡಿತಗಳು, ನಮ್ಮ ಅತ್ಯಾನಂದ
ರಾಧಾಕೃಷ್ಣರ ವಿವಾಹ ಕೂಟ, ಅವರು ಮುದ್ದಿಸುವುದೇ ನಮ್ಮ ಪ್ರೇಮ.

ಕಹಳೆಗಳ ತಾರಕ ಸ್ವರದ ಗರ್ಜನೆಯಲಿರುವುದು ಅವಲ ಬಲ
ಅವನು ರಥವನೇರುವನು, ಭರ್ಚಿಯಿಂದಿರಿಯುವನು
ಮಿತಿಯಿಲ್ಲದೆ ವಧಿಸುವನು ಕನಿಕರದಿಂದಲೂ ಕೂಡಿಹನು
ಜಗತ್ತಿಗಾಗಿ ಅದರ ಕೊನೆಯ ವರುಷಗಳಿಗಾಗಿ ಹೋರಾಡುವನು.

ಲೋಕಗಳ ವಿಸ್ತಾರದಲಿ, ಯುಗಗಳ ಭವ್ಯ ಅಲೆಗಳಲಿ
ಮಾತಿಗೆ ನಿಲುಕದವ, ಪ್ರಬಲ ಘನಗಾಂಭೀರ್ಯವುಳ್ಳವನು, ಶುದ್ಧನು,
ಚಿಂತಕನು ತಲುಪಬಹುದಾದ ಕೊನೆಯ ಗೋಪುರದಾಚೆ
ತನ್ನ ಶಾಶ್ವತ ಆಸನಗಳಲಿ ಅಭಿಷಿಕ್ತನಾಗಿಹನು.

ಮಾನವನ ಒಡೆಯ ಅವನ ಅನಂತ ಪ್ರೇಮಿ
ನಮಗವನ ನೋಡುವ ದೃಷ್ಟಿಯಿರೆ ನಮ್ಮ ಹೃದಯಗಳಿಗವನು ಅತಿ ಸಮೀಪ
ನಮ್ಮ ಅಭಿಮಾನ ಭಾವೋದ್ರೇಕಗಳ ಆಡಂಬರಗಳಿಂದಾಗಿ ಕುರುಡರಾಗಿಹೆವು
ನಮ್ಮ ಯೋಚನೆಗಳಲಿ ನಾವು ಬಂಧಿತರು ಅವುಗಳಲ್ಲಿಯೆ ನಾವು
ಮುಕ್ತರೆಂದುಕೊಳ್ಳುವೆವು.

ಸೂರ್ಯನಲಿ ಕಾಲಾತೀತ, ಮರಣಾತೀತನಾದವನೆ ಅವನು
ಮಧ್ಯರಾತ್ರಿಯಲಿ ಅವನ ಛಾಯೆ ಚೆಲ್ಲಿಕೊಂಡಿತ್ತು
ಅಂಧಕಾರ ಕುರುಡಾದಾಗ ಅಂಧಕಾರದ ಒಳಗೆ ಅದು ಮುಳುಗಿ ಹೋದಾಗ
ಅದರೊಳಗೆ ಅವನು ಅಸೀನನಾಗಿದ್ದ ಅಪರಿಮಿತನಾಗಿ ಏಕಾಕಿಯಾಗಿ.

– ಶ್ರೀ ಅರವಿಂದರು

*

## ಶ್ರೀ ಅರವಿಂದರು ಕೊಡುವ ಭರವಸೆ

(ಅಗಸ್ಟ್ 15, 2007ರಂದು ವಿತರಿಸಿದ ದರ್ಶನ ದಿನದ ಸಂದೇಶ)

ಬೇರೆ ಯಾವುದೇ ವಿಷಯದ ಬಗ್ಗೆ ಮನುಷ್ಯ ಸಂಶಯ ಪಡಬಹುದು, ಆದರೆ ಕೇವಲ ಭಗವಂತನನ್ನು ಬಯಸುವವರು ಅವನನ್ನು ತಲುಪುವರೆಂಬುದು ಸುನಿಶ್ಚಿತ–ವಾದದ್ದು. ಈ ನಿಶ್ಚಿತತೆ ಸಂಖ್ಯೆ ಎರಡಕ್ಕೆ ಎರಡು ಕೂಡಿಸಿದರೆ ನಾಲ್ಕು ಬರುತ್ತದೆ ಎಂಬುದಕ್ಕಿಂತ ಹೆಚ್ಚು ದೃಢವಾದದ್ದು. ಸಾಧಕ, ಅವನ ಎಲ್ಲ ಎಡವುವಿಕೆಗಳಲ್ಲಿ, ಎದುರಿಸಬೇಕಾದ ಹೊಡೆತಗಳಲ್ಲಿ ಮತ್ತು ಸತ್ವ ಪರೀಕ್ಷೆಗಳಲ್ಲಿ ಆ ನಂಬಿಕೆಯನ್ನು ತನ್ನ ಹೃದಯದ ಆಳದಲ್ಲಿ ಇರಿಸಿಕೊಳ್ಳಬೇಕು, ಅದು ಅವನಿಗೆ ಆಧಾರ ಒದಗಿಸುವುದು.



– ಶ್ರೀ ಅರವಿಂದರು

*

## ದೇಹವೂ ಕೂಡ ದೇವನನ್ನು ನೆನಪಿಸಿಕೊಳ್ಳುತ್ತದೆ

(22/340) ಜೀವಕೋಶಗಳು, ಅಣುಗಳು, ರಕ್ತಕಣಗಳು ಇವುಗಳಿರುವ ದೇಹದ್ದೇ ಸ್ವತಃ, ಮಬ್ಬಿಗೊಳಗಾದ ಮನಸ್ಸಿರುತ್ತದೆ. ಜರ್ಮನ್ ಭೌತವಾದಿ ಹ್ಯಾಕೆಲ್ (Haeckel) ಎಲ್ಲಿಯೋ ಒಂದೆಡೆ ಪರಮಾಣುವಿನ ಸಂಕಲ್ಪ ಕುರಿತು ಹೇಳಿದ್ದಾನೆ. ಪ್ರತಿಯೊಂದು ಪ್ರತ್ಯೇಕ ಎಲೆಕ್ಟ್ರೋನ್‌ದ ಚಟುವಟಿಕೆಯಲ್ಲಿ ಕಂಡುಬರುವ ಲೆಕ್ಕಕ್ಕೆ ಸಿಗದ ವ್ಯತ್ಯಾಸದೊಡನೆ ವ್ಯವಹರಿಸುವಾಗ ಅದು ಆಕಾರದ್ದಲ್ಲ, ಆದರೆ ರಹಸ್ಯ ನೈಜತೆ ಚೆಲ್ಲಿಕೊಟ್ಟ ಛಾಯೆಯೆಂದು ಗ್ರಹಿಸುವ ಮಟ್ಟವನ್ನು ಇತ್ತೀಚಿನ ವಿಜ್ಞಾನ ತಲುಪಿದೆ. ದೇಹಕ್ಕೇ ವಿಶೇಷವಾಗಿರುವ ಮನಸ್ಸು ಕಲ್ಪನೆಯದಲ್ಲದ ಸತ್ಯ; ಅದರ ಮಬ್ಬುತನದಿಂದಾಗಿ, ಭೂತಕಾಲದ ಚಟುವಟಿಕೆಗಳಿಗೆ ಯಾಂತ್ರಿಕವಾಗಿ ಅಂಟಿ–ಕೊಳ್ಳುವಿಕೆ ಮತ್ತು ಹೊಸದನ್ನು ಸುಲಭವಾಗಿ ಮರೆಯುವಿಕೆ, ತಿರಸ್ಕರಿಸುವಿಕೆ ಇವುಗಳಿಂದಾಗಿ ಅದರಲ್ಲಿ ಅತಿಮನಸ್ಸಿನ ದೈವೀ ಶಕ್ತಿ ವ್ಯಾಪಿಸಿಕೊಳ್ಳುವುದಕ್ಕೆ ಹಾಗೂ ದೇಹ ತನ್ನ ಕಾರ್ಯದಲ್ಲಿ ಪರಿವರ್ತನೆ ಕಂಡುಕೊಳ್ಳುವುದಕ್ಕೆ ಮುಖ್ಯವಾದ ಅಡ–ಚಣೆಗಳು ಇರುವುದನ್ನು ಕಾಣುತ್ತೇವೆ. ತದ್ವಿರುದ್ಧವಾಗಿ ಅದು ಒಮ್ಮೆ ಪರಿಣಾಮ–ಕಾರಿಯಾದ ಬದಲಾವಣೆಗೆ ಒಳಗಾದರೆ ಭೌತಿಕ ಪ್ರಕೃತಿಯಲ್ಲಿ ಅತಿಮಾನಸ ಪ್ರಕಾಶವನ್ನು ಮತ್ತು ದೈವೀಶಕ್ತಿಯನ್ನು ಸ್ಥಿರಗೊಳಿಸಲು ಒಂದು ಬಹಳ ಮೌಲ್ಯವುಳ್ಳ ಉಪಕರಣವಾಗುವುದು.

*

(22/247) ಸತ್ತೆಯ ಪ್ರತಿಯೊಂದು ಸ್ತರಕ್ಕೆ–ಅದು ಮನಸ್ಸಿನದು, ಪ್ರಾಣಿಕದ್ದು ಇಲ್ಲವೆ ಭೌತಿಕದ್ದು ಹೀಗೆ ಯಾವುದೇ ಆಗಿರಲಿ–ಅದರದೇ ಪ್ರಜ್ಞೆಯಿರುತ್ತದೆ, ಪ್ರತಿಯೊಂದು ಪ್ರತ್ಯೇಕವಾಗಿದ್ದರೂ ಪರಸ್ಪರ ಸಂಬಂಧವುಳ್ಳದ್ದು, ಪರಸ್ಪರ ಪ್ರತಿಕ್ರಿಯಿಸುವಂಥದ್ದು ಆಗಿರುತ್ತದೆ. ಆದರೆ ನಮ್ಮ ಬಾಹ್ಯ ಮನಸ್ಸಿಗೆ, ಇಂದ್ರಿಯಕ್ಕೆ, ಎಚ್ಚರದಿಂದಿರುವ ನಮ್ಮ ಪ್ರಜ್ಞೆಯಲ್ಲಿ ಅವೆಲ್ಲವೂ ಒಟ್ಟಿನಲ್ಲಿ ಗೊಂದಲಕ್ಕೀಡಾ–ಗಿರುತ್ತವೆ. ನಮ್ಮ ದೇಹಕ್ಕೆ ಅದರದೇ ಆದ ಪ್ರಜ್ಞೆಯಿದೆ, ಮತ್ತು ಅದರ ಸಹಾಯ–ದಿಂದ ಕಾರ್ಯ ಮಾಡುತ್ತದೆ, ಆ ಕಾರ್ಯ ನಮ್ಮ ಯಾವ ಮಾನಸಿಕ

ಸಂಕಲ್ಪವಿಲ್ಲದೆ, ಸಂಕಲ್ಪವಿದ್ದಾಗ ಅದರ ವಿರುದ್ಧವಾಗಿಯೂ ಕೂಡ ನಡೆಯುತ್ತದೆ. ಮೇಲ್ಮೈಯಲ್ಲಿರುವ ನಮ್ಮ ಮನಸ್ಸು ಅದರ ಬಗ್ಗೆ ತಿಳಿದುಕೊಂಡಿರುವುದು ಅತ್ಯಲ್ಪ, ಅದರ ಬಗ್ಗೆ ಅಪರಿಪೂರ್ಣವಾಗಿ ಭಾವನೆಗೆ ತಂದುಕೊಳ್ಳುತ್ತದೆ, ಅದರ ಪರಿಣಾಮಗಳನ್ನು ನೋಡುತ್ತದೆ, ಅವುಗಳ ಕಾರಣಗಳನ್ನು ಕಂಡುಕೊಳ್ಳುವುದು ಅದಕ್ಕೆ ಅತ್ಯಂತ ಕಠಿಣವಾಗಿರುತ್ತದೆ. ದೇಹದ ಈ ಪ್ರತ್ಯೇಕ ಪ್ರಜ್ಞೆಯ ಬಗ್ಗೆ ಅರಿವುಳ್ಳವರಾಗುವುದು, ಅದರ ಚಲನೆಗಳನ್ನು ಮತ್ತು ಬಾಹ್ಯದಲ್ಲಿ ಇಲ್ಲವೆ ಅಂತರಂಗದಲ್ಲಿ ಅದರ ಮೇಲೆ ಕಾರ್ಯ ಮಾಡುವ ಶಕ್ತಿಗಳನ್ನು ನೋಡುವುದು ಹಾಗೂ ಭಾವನೆಗೆ ತಂದುಕೊಳ್ಳುವುದು ಹಾಗೂ ಅವುಗಳನ್ನು ಹೇಗೆ ನಿಯಂತ್ರಿಸಬೇಕು ಎಂಬುದನ್ನು ಕಲಿತುಕೊಳ್ಳುವುದು, ಮತ್ತು ಅದರಲ್ಲಿ ಅಡಗಿಕೊಂಡಿರುವ ಹೆಚ್ಚಿನ ಭಾಗವನ್ನು, ನಮಗೆ ಅವಚೇತನದ ವಿಧಾನಗಳೆಂದು ಕಂಡುಬರುವುದನ್ನು ನಿರ್ದೇಶಿಸುವುದು ಯೋಗದ ಒಂದು ಭಾಗವಾಗಿರುತ್ತದೆ. ಆದರೆ ದೇಹ–ಪ್ರಜ್ಞೆಯೇ ಸ್ವತಃ ನಮ್ಮಲ್ಲಿ ವ್ಯಕ್ತೀಕರಣಗೊಂಡ ಭೌತಿಕ ಪ್ರಜ್ಞೆಯ ಒಂದು ಭಾಗವಾಗಿರುತ್ತದೆ. ಆ ಭೌತಿಕ ಪ್ರಜ್ಞೆಯನ್ನು ನಾವು ರಹಸ್ಯವಾಗಿ ಪ್ರಜ್ಞಾ–ಪೂರ್ಣವಾಗಿರುವ ವಿಶ್ವಂಭರ ಭೌತಿಕ ಪ್ರಕೃತಿಯಿಂದ ಸಂಗ್ರಹಿಸುತ್ತೇವೆ ಮತ್ತು ನಿರ್ಮಾಣ ಮಾಡುತ್ತೇವೆ.

*

(26/208) ದೇಹ ಒಂದು ಉಪಕರಣವೆಂದು (ಧರ್ಮ ಸಾಧನವೆಂದು) ಅದಕ್ಕೆ ನಾನು ಒಂದು ಮೌಲ್ಯವನ್ನು ಕೊಡುತ್ತೇನೆ. ಅದಕ್ಕೂ ಹೆಚ್ಚಾಗಿ ವ್ಯಕ್ತಿವಿಶಿಷ್ಟತೆಯ ಕಾರ್ಯದ ಕೇಂದ್ರವೆಂದು, ಪೃಥ್ವಿಯ ಮೇಲೆ ಎಲ್ಲ ಜೀವನ ಹಾಗೂ ಚಟುವಟಿಕೆ ಇರುವ ಹಾಗೆ ಆಧ್ಯಾತ್ಮಿಕ ಜೀವನದ ಹಾಗೂ ಚಟುವಟಿಕೆಯ ಆಧಾರವೆಂದು ಅದಕ್ಕೆ ಇನ್ನೂ ಹೆಚ್ಚು ಮೌಲ್ಯವಿರುತ್ತದೆ, ಹಾಗೆಯೇ ಇನ್ನೂ ಒಂದು ಕಾರಣವೆಂದರೆ ನನಗೆ ದೇಹವು, ಮನಸ್ಸು ಹಾಗೂ ಪ್ರಾಣಗಳಿರುವ ಹಾಗೆ ದೈವೀ ಇಡಿಯಾದುದರ ಭಾಗವಾಗಿದೆ, ದಿವ್ಯಾತ್ಮನ ಒಂದು ರೂಪವಾಗಿದೆ ಮತ್ತು ಆ ಕಾರಣದಿಂದಾಗಿ ಅದು ಚಿಕಿತ್ಸೆಗೊಳಗಾಗದಷ್ಟು ಸ್ಥೂಲವಾದದ್ದೆಂದು, ಆಧ್ಯಾತ್ಮ ಸಿದ್ಧಿಗೆ, ಉಪಯೋಗಕ್ಕೆ ಕ್ಷಮತೆಯಿಲ್ಲದ್ದೆಂದು ಅದನ್ನು ಅಲಕ್ಷ್ಯ ಮಾಡಬಾರದು ಮತ್ತು ಕಡೆಗಣಿಸಬಾರದು. ಭೌತದ್ರವ್ಯವೇ ಸ್ವತಃ ದಿವ್ಯಾತ್ಮನ ಒಂದು ರೂಪವಾಗಿದೆ ಮತ್ತು ಅದು ಆ ರೀತಿಯಲ್ಲಿ ತನ್ನನ್ನು ತೆರೆದು ತೋರಿಸಬೇಕಾಗಿದೆ, ಅದು ಪ್ರಜ್ಞೆಗೆ ಎಚ್ಚತ್ತುಕೊಳ್ಳುವಂತೆ ಉತ್ಕ್ರಾಂತಿ ಹೊಂದುವಂತೆ, ತನ್ನೊಳಗಿರುವ ದಿವ್ಯಾತ್ಮನನ್ನು ಸಿದ್ಧಿಸಿಕೊಳ್ಳುವಂತೆ ಮಾಡಬೇಕು. ನನ್ನ ದೃಷ್ಟಿಯಲ್ಲಿ ಮನಸ್ಸು, ಪ್ರಾಣ ಹಾಗೂ ದೇಹ ಇವುಗಳನ್ನು ಆಧ್ಯಾತ್ಮೀಕರಣ–



ಗೊಳಿಸಬೇಕು, ಇಲ್ಲವೆ ದೈವೀಕರಣಗೊಳಿಸಬೇಕು ಅದರಿಂದಾಗಿ ಅವು ಭಗವಂತ–ನನ್ನು ಸಿದ್ಧಿಸಿಕೊಳ್ಳಲು ಯೋಗ್ಯವಾದ ಉಪಕರಣ ಮತ್ತು ಹಿಡಿದಿಟ್ಟುಕೊಳ್ಳುವ ಪಾತ್ರೆಯಂತಾಗುತ್ತವೆ.

*

(22/323–24) ಇಲ್ಲಿ ಅನುಸರಿಸುತ್ತಿರುವ ಯೋಗವು ಇತರ ಯೋಗಗಳಿಗಿಂತ ಭಿನ್ನ ಉದ್ದೇಶ ಹೊಂದಿದೆ–ಏಕೆಂದರೆ ಅದರ ಗುರಿಯು ಸಾಮಾನ್ಯ ಅಜ್ಞಾನದ ಜಗತ್ತಿನ ಪ್ರಜ್ಞೆಯಿಂದ ದೈವೀಪ್ರಜ್ಞೆಯಲ್ಲಿ ಹೊರಬರುವುದಾಗಿದೆಯಲ್ಲದೆ, ಅಜ್ಞಾನ–ದಲ್ಲಿರುವ ಮನಸ್ಸು, ಪ್ರಾಣ, ದೇಹಗಳಲ್ಲಿ ಅವುಗಳನ್ನು ಪರಿವರ್ತಿಸಲು ಅತಿಮಾನಸ ಸಾಮರ್ಥ್ಯವನ್ನು ಕೆಳಗಿಳಿಸಿ ತರುವುದಾಗಿದೆ ಮತ್ತು ಇಲ್ಲಿ ಭೌತದ್ರವ್ಯದಲ್ಲಿ ದೈವೀ ಜೀವನವನ್ನು ಸೃಷ್ಟಿಸಲು ಭಗವಂತನನ್ನು ಪ್ರಕಟಗೊಳಿಸುವುದಾಗಿದೆ.

*

(24/1220) ಇವು ಉಚ್ಚತರ ದೈವೀಪ್ರಜ್ಞೆಯು ಅತ್ಯಂತ ಭೌತಿಕವಾದುದರಲ್ಲಿ ಅವರೋಹಣ ಮಾಡುವುದರಿಂದ ಆಗುವ ಕೆಲವು ಪರಿಣಾಮಗಳಾಗಿವೆ. ಅದು ಪ್ರಕಾಶ, ಪ್ರಜ್ಞೆ, ಶಕ್ತಿ, ಆನಂದ ಇವುಗಳನ್ನು ಜೀವಕೋಶಗಳಲ್ಲಿ ಹಾಗೂ ಎಲ್ಲ ಭೌತಿಕ ಚಲನೆಗಳಲ್ಲಿ ತರುತ್ತದೆ; ದೇಹವು ಪ್ರಜ್ಞಾಪೂರ್ಣವಾಗುತ್ತದೆ, ಜಾಗರೂಕವಾಗುತ್ತದೆ ಮತ್ತು ಉಚ್ಚತರ ಸಂಕಲ್ಪಕ್ಕೆ ವಿಧೇಯವಾಗಿದ್ದುಕೊಂಡು ಇಲ್ಲವೆ ಅದರಲ್ಲಿ ಪ್ರವೇಶಿಸಿದ ಉಚ್ಚತರ ಪ್ರಜ್ಞೆಯ ಶಕ್ತಿಯಿಂದಾಗಿ ಸ್ವಯಂಪ್ರೇರಣೆಯಿಂದ ಸರಿಯಾದ ಚಲನೆಗಳನ್ನು ಮಾಡುತ್ತದೆ, ಅನಾರೋಗ್ಯವನ್ನು ಹಾಗೂ ವೇದನೆಗಳನ್ನು ನಿವಾರಿಸುತ್ತದೆ. ದೇಹದ ಕಾರ್ಯಗಳ ಮೇಲೆ ಶ್ರೇಷ್ಠತರ ನಿಯಂತ್ರಣ ಬರುತ್ತದೆ ಮತ್ತು ಅದಕ್ಕೆ ಬಾಹ್ಯದಿಂದ ಬರುವ ಅಪಘಾತಗಳು, ಚಿಕ್ಕಮುಟ್ಟ ದುರ್ಘಟನೆಗಳು ಇಂತಹವುಗಳ ಮೇಲೂ ನಿಯಂತ್ರಣ ಬರುತ್ತದೆ. ದೇಹವು ಕಾರ್ಯಕೈಕೊಳ್ಳು–ವುದಕ್ಕಾಗಿ ಹೆಚ್ಚು ಪರಿಣಾಮಕಾರಿಯಾದ ಉಪಕರಣವಾಗುತ್ತದೆ. ದಣಿವು ಕಡಿಮೆ–ಯಾಗುವಂತೆ ಮಾಡಲು ಸಾಧ್ಯವಾಗುತ್ತದೆ. ಶಾಂತಿ, ಸಂತೋಷ, ಬಲ, ದೇಹ ಹಗುರಾಗಿರುವಿಕೆ ಇವು ಇಡೀ ಭೌತಿಕ ವ್ಯವಸ್ಥೆಯಲ್ಲಿ ಬರುತ್ತವೆ. ಇವು ಸ್ಪಷ್ಟವಾದ, ಸಾಮಾನ್ಯವಾದ ಪರಿಣಾಮಗಳು, ಪ್ರಜ್ಞೆ ಬೆಳೆದಂತೆ ಅವು ಬೆಳೆಯುತ್ತವೆ, ಆದರೆ ಅವುಗಳ ಹಾಗಿರುವ ಸಾಧ್ಯವಾಗಬಹುದಾದ ಅನೇಕ ವಿಷಯಗಳಿರುತ್ತವೆ. ಅದರೊಂದಿಗೆ ಪೃಥ್ವೀಪ್ರಜ್ಞೆಯೊಡನೆ ಏಕತೆಯಿರುತ್ತದೆ, ಭೌತಿಕದಲ್ಲಿ ಭಗವಂತ–ನಿರುವುದರ ಭಾವನೆ ಸತತವಾಗಿ ಇರುತ್ತದೆ.

ಸಹಜವಾಗಿ ಭೌತಿಕವು ಇಡಿಯಾಗಿ ಪ್ರಜ್ಞಾಪೂರ್ಣವಾಗುವಂತೆ ಮಾಡುವುದು ಸುಲಭವಲ್ಲ–ಏಕೆಂದರೆ ಅದರಲ್ಲಿ ಅಪ್ರಜ್ಞೆ, ಮಬ್ಬುತನ ಹಾಗೂ ಜಡತೆ ಆಸೀನವಾಗಿರುತ್ತವೆ, ಆದರೆ ಉಚ್ಚತರ ದೈವೀ ಪ್ರಜ್ಞೆಯು ಭಾಗಶಃ ಮತ್ತು ಸಾಕಷ್ಟು ಪರಿಣಾಮಕಾರಿಯಾಗುವಂತೆ ಆಚರಣೆಯಲ್ಲಿ ತರುವುದನ್ನು ಆಧಾರಕ್ಕಾಗಿ ಪ್ರತಿ–ಷ್ಠಾಪಿಸಬಹುದು, ಮತ್ತು ದೇಹದಲ್ಲಿ ಅದರ ಶಕ್ತಿ ಬೆಳೆದ ಹಾಗೆ ಉಳಿದದ್ದೆಲ್ಲದರ ಮೇಲೆ ಜಯ ಸಾಧಿಸಬಹುದು.

*

(Guidance from Sri Aurobindo : Nagin Doshi, Vol. 2, p. 9)

ದೇಹವು ಹೆಚ್ಚಾಗಿ ಅಪ್ರಜ್ಞೆಯದಾಗಿರುತ್ತದೆ, ಅದಕ್ಕೂ ಹೆಚ್ಚಾಗಿ ಅದು ಅವ–ಚೇತನದ್ದಾಗಿರುತ್ತದೆ – ಅದು ಪ್ರಜ್ಞಾಪೂರ್ಣವಾಗುವಂತೆ ಮಾಡಬೇಕು.

**ಪ್ರಶ್ನೆ :** *ಅದು ಪ್ರಜ್ಞಾಪೂರ್ಣವಾಗುವಂತೆ ಮಾಡುವುದು ಹೇಗೆ?*

**ಶ್ರೀ ಅ :** ನಿಜವಾದ ಪ್ರಜ್ಞೆಯನ್ನು ಅದರೊಳಗೆ ಕೆಳಗಿಳಿಸಿ ತರುವುದರ ಮೂಲಕ, ಮತ್ತು ಮನಸ್ಸು, ಪ್ರಾಣಿಕಗಳಲ್ಲಿ ಅಚಂಚಲರೂ, ಜಾಗರೂಕರೂ ಆಗಿರುವುದರ ಮೂಲಕ ಮಾಡಬಹುದು.

*

(24/1432) ಭೌತಿಕವನ್ನು (ಶರೀರ) ಕುರಿತು ಸಾಧನೆ ಕೈಕೊಳ್ಳುವುದೆಂದರೆ ಉಚ್ಚತರ ಪ್ರಕಾಶ, ಸಾಮರ್ಥ್ಯ, ಶಾಂತಿ, ಆನಂದ ಇವುಗಳನ್ನು ದೇಹದ ಪ್ರಜ್ಞೆಯಲ್ಲಿ ಕೆಳಗಿಳಿಸಿ ತರುವುದಾಗಿದೆ; ಭೌತಿಕದ ಜಡತೆಯನ್ನು, ಸಂಶಯಗಳನ್ನು, ಮಿತಿ–ಗಳನ್ನು, ಬಾಹ್ಯದತ್ತ ಹೊರಳಿರುವ ಭೌತಿಕ ಮನಸ್ಸಿನ ಪ್ರವೃತ್ತಿಯನ್ನು, ಪ್ರಾಣಿಕ–ಭೌತಿಕದ (ನರಮಂಡಲದ) ದೋಷಪೂರ್ಣ ಚೈತನ್ಯಗಳನ್ನು ತೊಡೆದು ಹಾಕುವುದಾಗಿದೆ, ಬದಲಾಗಿ ಅವುಗಳ ಸ್ಥಾನದಲ್ಲಿ ನಿಜವಾದ ಪ್ರಜ್ಞೆಯನ್ನು ಕೆಳಗಿಳಿಸಿ ತರುವುದಾಗಿದೆ, ಅದರಿಂದಾಗಿ ಭೌತಿಕವು ಭಗವಂತನ ಸಂಕಲ್ಪಕ್ಕೆ ಪರಿಪೂರ್ಣ ಉಪಕರಣವಾಗಲು ಸಾಧ್ಯವಾಗುವುದು.

*

(22/323–24) ಕೊನೆಯದಾಗಿ ಹೇಳುವುದಾದರೆ ದೇಹ ವಿಧೇಯವಾಗಿರಲು ಅದನ್ನು ತರಬೇತಿಗೊಳಪಡಿಸಿದ ವಿಷಯಗಳಲ್ಲಿ, ಸಹಜವಾಗಿ ಮನಸ್ಸಿಗೆ ವಿಧೇ–ಯವಾಗಿರುತ್ತದೆ, ಆದರೆ ಮನಸ್ಸಿನೊಡನೆ ದೇಹದ ಸಂಬಂಧ, ಸ್ವಯಂಪ್ರೇರಣೆ–



ಯಿಂದ ಪರಿಪೂರ್ಣ ಉಪಕರಣವೆಂದು ಕಾರ್ಯಮಾಡುವ ವಿಷಯಗಳಲ್ಲಿ–ರುವುದಿಲ್ಲ. ದೇಹಕ್ಕೆ ಅದರದೇ ಪ್ರಜ್ಞೆಯಿದೆ, ಆ ಪ್ರಜ್ಞೆ ತಳಶಾಯಿ ಉಪಕರಣದ್ದು ಇಲ್ಲವೆ ಸೇವಕನ ಪ್ರಜ್ಞೆಯದು, ಅದು ವಿಧೇಯವಾಗಿರುವುದನ್ನು ಒಪ್ಪಿಕೊಳ್ಳದೆ ಇರಬಹುದು ಇಲ್ಲವೆ ವಿಧೇಯವಾಗಿರುವುದರಲ್ಲಿ ವಿಫಲವಾಗಬಹುದು. ಹಲವಾರು ವಿಷಯಗಳಲ್ಲಿ, ಉದಾಹರಣೆಗೆ, ಆರೋಗ್ಯ ಹಾಗೂ ಅನಾರೋಗ್ಯದ ವಿಷಯಗಳಲ್ಲಿ ದೇಹ ತಾನೇ ಸ್ವತಃ ಕಾರ್ಯಮಾಡುತ್ತದೆ, ಅದು ಮನಸ್ಸಿನ ಸೇವಕ–ನಂತಿರುವುದಿಲ್ಲ. ಅದಕ್ಕೆ ದಣಿವಾದರೆ ಅದು ಮನಸ್ಸಿನ ಸಂಕಲ್ಪಕ್ಕೆ ನಿಷ್ಕ್ರಿಯ ಪ್ರತಿ–ರೋಧವನ್ನು ವ್ಯಕ್ತಪಡಿಸಬಹುದು. ಅದು ತಮಸ್ಸಿನಿಂದ, ಜಡತೆಯಿಂದ, ಮಬ್ಬಿನಿಂದ ಹಾಗೂ ಅವಚೇತನದ ಹೊಗೆಯಿಂದ ಮನಸ್ಸನ್ನು ಕವಿದುಬಿಡಬಹುದು, ಅದರಿಂದಾಗಿ ಮನಸ್ಸು ಕಾರ್ಯ ಕೈಕೊಳ್ಳದಂತಾಗುವುದು. ತೋಳಿಗೆ ಕೈಮೇಲಕ್ಕೆತ್ತು ಎಂಬ ಸೂಚನೆ ಕೊಟ್ಟಾಗ ಅದು ಮೇಲಕ್ಕೇಳುತ್ತದೆ, ಆದರೆ ಕಾಲುಗಳಿಗೆ ಮೊದಲು ನಡೆ ಎಂದು ಹೇಳಿದಾಗ ಅವು ಕೂಡಲೆ ನಡೆಯತೊಡಗುವುದಿಲ್ಲ, ಮೊದಲು ಅಂಬೆಗಾಲಿಕ್ಕುವ ಅಭ್ಯಾಸವನ್ನು ಹೇಗೆ ಕೈಬಿಡಬೇಕು, ನೇರವಾಗಿ ಹೇಗೆ ನಿಂತು–ಕೊಳ್ಳಬೇಕು. ಕಾಲುಗಳು ಚಲಿಸುವ ರೂಢಿಯನ್ನು ಹೇಗೆ ಮಾಡಬೇಕು ಎಂಬು–ದನ್ನು ಕಲಿತುಕೊಳ್ಳಬೇಕಾಗುತ್ತದೆ. ನೀವು ಮೊಟ್ಟಮೊದಲಿಗೆ ಸರಳರೇಖೆಯನ್ನು ತೆಗೆ ಎಂದು ನಿಮ್ಮ ಕೈಗೆ ಹೇಳಿದಾಗ, ಸಂಗೀತ ನುಡಿಸು ಎಂದಾಗ ಅದನ್ನು ಅದು ಮಾಡಲಾರದು, ಅದಕ್ಕೆ ಶಿಕ್ಷಣ ಕೊಡಬೇಕಾಗುತ್ತದೆ, ತರಬೇತು ನೀಡಬೇಕಾಗುತ್ತದೆ, ಬೋಧಿಸಬೇಕಾಗುತ್ತದೆ, ನಂತರ ಅದು ಮಾಡಬೇಕಾದುದನ್ನು ಸ್ವಯಂಚಾಲಿತ–ವೆನ್ನುವಂತೆ ಮಾಡುತ್ತದೆ. ಇದೆಲ್ಲವೂ ದೇಹದ್ದೇ ಪ್ರಜ್ಞೆಯಿದೆ ಎಂಬುದನ್ನು ಸಿದ್ಧಮಾಡಿ ತೋರಿಸುತ್ತದೆ, ಆದರೆ ಅದನ್ನು ಜಾಗ್ರತಗೊಳಿಸಬೇಕು, ತರಬೇತಿ–ಗೊಳಪಡಿಸಬೇಕು, ಒಳ್ಳೆಯ ಪ್ರಜ್ಞಾವಂತ ಉಪಕರಣವನ್ನಾಗಿ ಮಾಡಬೇಕು. ಅದನ್ನು ಎಷ್ಟರಮಟ್ಟಿಗೆ ತರಬೇತಿಗೊಳಪಡಿಸಬಹುದೆಂದರೆ ಮನಸ್ಸಿನ ಸಂಕಲ್ಪ ಇಲ್ಲವೆ ಸೂಚನೆ ದೇಹದ ಅನಾರೋಗ್ಯಕ್ಕೆ ಚಿಕಿತ್ಸೆ ಒದಗಿಸಬಹುದು.

*

(24/1445) ದೇಹ–ಪ್ರಜ್ಞೆಯ ಬಹಳಷ್ಟು ಭಾಗ ಅವಚೇತನದ್ದಾಗಿರುತ್ತದೆ, ದೇಹ–ಪ್ರಜ್ಞೆ ಮತ್ತು ಅವಚೇತನ ಒಟ್ಟಿಗೆ ಗಟ್ಟಿಯಾಗಿ ಕೂಡಿಕೊಂಡಿವೆ.

ದೇಹ ಮತ್ತು ಭೌತಿಕ ಇವೆರಡೂ ಏಕರೂಪದವಾಗಿರುವುದಿಲ್ಲ–ದೇಹ ಪ್ರಜ್ಞೆಯು ಇಡೀ ಭೌತಿಕ ಪ್ರಜ್ಞೆಯ ಒಂದು ಭಾಗ ಮಾತ್ರ.

**– ಶ್ರೀ ಅರವಿಂದರು**

# ಆಧ್ಯಾತ್ಮಿಕ ಶಕ್ತಿಯಿಂದ ರೋಗ ಗುಣಪಡಿಸುವುದು

## ದೈವೀ ಕೃಪೆಯ ಮೂಲಕ

(23/609–10) ದೈವೀ ಕೃಪೆಯನ್ನು ಕುರಿತು ನಾನು ಒಂದಿಷ್ಟು ಹೇಳಲು ಬಯಸುತ್ತೇನೆ. ಮಾನವ ಬುದ್ಧಿಮತ್ತೆಯ ತರ್ಕಕ್ಕೆ ಬಹಳ ಭಿನ್ನವಲ್ಲದ ರೀತಿಯಲ್ಲಿ ದೈವೀ ತರ್ಕದಂತಹದೂ ಕೂಡ ಕಾರ್ಯಮಾಡಬೇಕೆಂದು ನೀನು ಯೋಚಿಸುತ್ತಿರುವಂತೆ ಇದೆ. ಆದರೆ ಅದು ಹಾಗಲ್ಲ. ಅದನ್ನು ಬಯಸಿದವರ ಮೇಲೆ ಪಕ್ಷಪಾತವಿಲ್ಲದೆ ಕಾರ್ಯಕೈಕೊಳ್ಳುವ, ಎಲ್ಲ ಪ್ರಾರ್ಥನೆಗಳನ್ನು ಒಪ್ಪಿಕೊಳ್ಳುವ ವಿಶ್ವಂಭರ ದೈವೀಕೃಪೆಯೂ ಅದಲ್ಲ. ಅದು ಸದ್ಗುಣಿಯನ್ನು ಆಯ್ದುಕೊಂಡು, ಪಾಪಿಯನ್ನು ತಿರಸ್ಕರಿಸುವುದಿಲ್ಲ. ಉಪದ್ರವಕಾರಿ ಸೌಲ ಅಫ್ ಟಾರ್ಸಸ್ (Saul of Tarsus), ಸ್ವೇಚ್ಛಾಚಾರಿ ಸೇಂಟ ಅಗಸ್ಟಿನ್, ಅಪಕೀರ್ತಿ ಗಳಿಸಿದ ಜಗಾಯಿ ಮಗಾಯಿ, ಬಿಲ್ವಮಂಗಲ ಇಂಥ ಅನೇಕರಿಗೆ ಸಹಾಯ ಮಾಡಲು ದೈವೀಕೃಪೆ ಬಂದಿತು. ಇದು ಮಾನವರ ನೈತಿಕ ಬುದ್ಧಿಮತ್ತೆಯ ನಿಷ್ಠುರ ನೈತಿಕತೆಯ ಹೆಸರು ಕೆಡಿಸುವಂತಿದೆ. ತಾನು ಮಾತ್ರವೇ ಧರ್ಮಿಷ್ಠ, ನ್ಯಾಯಪರ ಇತ್ಯಾದಿಯಾಗಿ ಮಿತಿಮೀರಿದ ನಂಬಿಕೆಯುಳ್ಳ ಸದ್ಗುಣಿಗೆ ಚಿಕಿತ್ಸೆ ನೀಡಲು ಮತ್ತು ಇಂತಹ ವಿಷಯಗಳಾಚೆಗಿರುವ ಹೆಚ್ಚು ಪರಿಶುದ್ಧ ಪ್ರಜ್ಞೆಯತ್ತ ಕೊಂಡೊಯ್ಯಲು ದೈವೀಕೃಪೆ ಬರಬಹುದು–ಏಕೆಂದರೆ ಎಲ್ಲ ದಾರ್ಶನಿಕರು ದೈವೀ ನಿಯಮ ಮತ್ತು ದೈವೀಕೃಪೆ ಇವುಗಳಲ್ಲಿರುವ ಭೇದವನ್ನು ಗುರುತಿಸಿದ್ದಾರೆ. ಅದು ಯಾವುದೇ ನಿಯಮಕ್ಕಿಂತ, ವಿಶ್ವವ್ಯಾಪಿ ದೈವೀ ನಿಯಮಕ್ಕಿಂತಲೂ ಹೆಚ್ಚು ಶ್ರೇಷ್ಠವಾದದ್ದು, ಆದಾಗ್ಯೂ ಅದು ವಿವೇಚನಾರಹಿತವಾಗಿರುವುದಿಲ್ಲ–ಅದರದೇ ವಿಶಿಷ್ಟವಾದ ವಿವೇಚನಾ ರೀತಿಯಿದೆ. ಅದು ವಿಷಯಗಳನ್ನು, ಜನರನ್ನು, ಸರಿಯಾದ ಕಾಲ ಹಾಗೂ ಋತುಗಳನ್ನು, ಮನಸ್ಸಿನ ದೃಷ್ಟಿಗಿಂತ ಇಲ್ಲವೇ ಇನ್ನಾವುದೇ ಸಾಮಾನ್ಯ ಸಾಮರ್ಥ್ಯಕ್ಕಿಂತ ಭಿನ್ನವಾದ ದೃಷ್ಟಿಯಿಂದ ನೋಡುತ್ತದೆ. ವ್ಯಕ್ತಿಯಲ್ಲಿ, ಬಹಳಷ್ಟು ಸಲ, ದಟ್ಟವಾದ ಪರದೆಗಳ ಹಿಂದೆ ದೈವೀಕೃಪೆಯ ಸ್ಥಿತಿಯನ್ನು ಸಿದ್ಧಪಡಿಸಲಾಗುತ್ತದೆ, ದೈವೀಕೃಪೆಯ ಸ್ಥಿತಿಯು ಬಂದಾಗ ಅದೇ ಸ್ವತಃ ಕಾರ್ಯಮಾಡುತ್ತದೆ. ಮೂರು ಸಾಮರ್ಥ್ಯಗಳಿವೆ : (1) ಕರ್ಮ ಇತ್ಯಾದಿಗಳ ವಿಶ್ವವ್ಯಾಪಿ ನಿಯಮ, (2) ದೈವೀ ಕರುಣೆ: ದೈವೀ ನಿಯಮದ ಮೂಲಕ ಕಾರ್ಯ ಮಾಡಬಹುದಾದ ಜಾಲಗಳ ಮೂಲಕ ತಲುಪಬಹುದಾದ ಎಲ್ಲರ ಮೇಲೆ ಅದು ಕಾರ್ಯಮಾಡುತ್ತದೆ. (3) ಹೆಚ್ಚು ಲೆಕ್ಕಾಚಾರ ಮಾಡದೆ ಮತ್ತು ಉಳಿದವುಗಳಿಗಿಂತ ಹೆಚ್ಚು ಪ್ರಬಲವಾಗಿ ಕಾರ್ಯ ಮಾಡುವ ದೈವೀಕೃಪೆ. ಇರುವ



ಕೇವಲ ಒಂದೇ ಪ್ರಶ್ನೆ ಎಂದರೆ ಜೀವನದ ಎಲ್ಲ ವೈಷಮ್ಯಗಳ ಹಿಂದೆ ಕರೆಗೆ ಓಗೊಡುವ ಮತ್ತು ತೊಂದರೆ ಏನೇ ಇದ್ದರೂ, ದೈವೀಕೃಪೆಯಿಂದಾಗುವ ಜ್ಞಾನೋದಯಕ್ಕೆ ತಯಾರಾಗುವವರೆಗೆ ತನ್ನನ್ನು ತೆರೆದುಕೊಂಡಿರುವ ಏನಾದರೂ ಇದೆಯೇ ಎಂಬುದು. ಆ ಏನಾದರೊಂದು ಮಾನಸಿಕ ಮತ್ತು ಪ್ರಾಣಿಕ ಚಲನೆಯಾಗಿರಬಾರದು, ಆದರೆ ಆಂತರಿಕವಾದ ಏನೋ ಒಂದಾಗಿರಬೇಕು; ಅದನ್ನು ಆಂತರಿಕ ಕಣ್ಣಿನಿಂದ ಸರಿಯಾಗಿ ಕಾಣಬಹುದಾಗಿದೆ. ಅದು ಅಲ್ಲಿದ್ದರೆ ಮತ್ತು ಮುಂಭಾಗದಲ್ಲಿ ಕ್ರಿಯಾಶೀಲವಾದರೆ, ಆಗ ದೈವೀಕರುಣೆ ಕಾರ್ಯ ಮಾಡಬಲ್ಲದು, ಆದರೂ ದೈವೀಕೃಪೆಯ ಸಂಪೂರ್ಣ ಕ್ರಿಯೆ ನಿರ್ಧಾರಕ ನಿರ್ಧಾರ ಇಲ್ಲವೆ ಬದಲಾವಣೆಗಾಗಿ ಇನ್ನೂ ಕಾದುಕೊಂಡಿರಬಹುದು, ಏಕೆಂದರೆ ಸತ್ತೆಯ ಯಾವುದೋ ಒಂದು ಭಾಗ ಇಲ್ಲವೆ ಅಂಶ, ಸಿದ್ಧವಾಗಿರದ ಏನೋ ಒಂದು ಇನ್ನೂ ನಡುವೆ ಅಡ್ಡಬರಬಹುದು.

ಆದರೆ ನಿನ್ನ ಹಾಗೂ ಭಗವಂತನ ನಡುವೆ ಯಾವುದೇ ವಿಚಾರ ಅಥವಾ ಘಟನೆಯಂತಹ ಏನಾದರೂ ಅಡ್ಡ ಬರಲು ಅನುವು ಏಕೆ ಮಾಡಿಕೊಡಬೇಕು? ನಿನ್ನಲ್ಲಿ ಪೂರ್ಣ ಅಭೀಪ್ಸೆ ಹಾಗೂ ಸಂತೋಷ ಇದ್ದಾಗ, ಬೇರೆ ಯಾವುದೂ ಲೆಕ್ಕಕ್ಕೆ ಬರದಿರಲಿ. ಭಗವಂತ ಹಾಗೂ ನಿನ್ನ ಅಭೀಪ್ಸೆ ಹೊರತಾಗಿ ಯಾವುದೂ. ಯಾವುದೇ ಬಗೆಯ ಪ್ರಾಮುಖ್ಯತೆ ಪಡೆಯದಿರಲಿ. ಭಗವಂತ ಬೇಗ, ಸಂಪೂರ್ಣವಾಗಿ, ಇಡಿಯಾಗಿ ದೊರಕಲಿ ಎಂದು ಮನುಷ್ಯ ಬಯಸಿದರೆ, ಅವನನ್ನು ಸಮೀಪಿಸುವ ಮನೋಭಾವ ಆ ಬಗೆಯದಾಗಿರಬೇಕು, ಅದು ಸಂಪೂರ್ಣವಾದದ್ದು, ಎಲ್ಲ ರೀತಿಯಲ್ಲಿ ಮಗ್ನವಾಗಿರಿಸುವಂತಹದು, ಬೇರಾವುದೂ ಮಧ್ಯೆ ಬರದಂತೆ ಮಾಡುವುದು ಆಗಿರಬೇಕು.

ಭಗವಂತನ ಬಗೆಗಿರುವ ಮಾನಸಿಕ ವಿಚಾರಗಳಿಗೆ ಯಾವ ಮೌಲ್ಯವಿದೆ? ಅವನು ಹೇಗಿರಬೇಕು, ಹೇಗೆ ಕಾರ್ಯ ಕೈಕೊಳ್ಳಬೇಕು, ಹೇಗೆ ಕಾರ್ಯ ಮಾಡಬಾರದು – ಇಂತಹ ವಿಚಾರಗಳು ಕೇವಲ ಅಡ್ಡಬರಬಲ್ಲವು, ಸ್ವತಃ ಭಗವಂತ ಮಾತ್ರ ಅತಿ ಮುಖ್ಯನಾದವನು. ಶ್ರೀಕೃಷ್ಣ ಶ್ರೀಕೃಷ್ಣನೇ, ಅವನು ಏನು ಮಾಡಿದ, ಏನು ಮಾಡಲಿಲ್ಲ ಎಂಬುದನ್ನು ಕುರಿತು ಮನುಷ್ಯ ಕಾಳಜಿ ಮಾಡುವುದಿಲ್ಲ, ಅವನನ್ನು ಕಾಣಬೇಕು, ಭೇಟಿಮಾಡಬೇಕು, ದೈವೀ ಪ್ರಕಾಶವನ್ನು, ಸಾನ್ನಿಧ್ಯವನ್ನು, ಪ್ರೇಮವನ್ನು ದಿವ್ಯಾನಂದವನ್ನು ಪಡೆಯಬೇಕು ಎಂಬುದು ಅತಿ ಮುಖ್ಯವಾದದ್ದು. ಆಧ್ಯಾತ್ಮಿಕ ಅಭೀಪ್ಸೆ ಯಾವಾಗಲೂ ಅದೇ ರೀತಿಯಲ್ಲಿರುತ್ತದೆ–ಅದು ಆಧ್ಯಾತ್ಮಿಕ ಜೀವನದ ನಿಯಮ.

*

## ಆಧ್ಯಾತ್ಮಿಕ ಶಕ್ತಿ ಹಾಗೂ ಅದನ್ನು ಗ್ರಹಿಸುವ ಸಾಮರ್ಥ್ಯದ ಮೂಲಕ

ಆಧ್ಯಾತ್ಮಿಕ ಶಕ್ತಿ ಅಸ್ತಿತ್ವದಲ್ಲಿದ್ದರೆ, ಅದು ಆಧ್ಯಾತ್ಮಿಕ ಪರಿಣಾಮಗಳನ್ನು ಉಂಟುಮಾಡಬೇಕು, ಮತ್ತು ಆಧ್ಯಾತ್ಮಿಕ ಶಕ್ತಿಯೇ ಮೂಲಶಕ್ತಿಯಾಗಿದ್ದರೆ ಉಳಿದ ಶಕ್ತಿಗಳು ಅದರಿಂದ ಉದ್ಭವವಾಗಬೇಕು, ಆಗ ಆಧ್ಯಾತ್ಮಿಕ ಶಕ್ತಿ ಮಾನಸಿಕ, ಪ್ರಾಣಿಕ ಮತ್ತು ಭೌತಿಕ ಶಕ್ತಿಗಳ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂದು ಹೇಳುವುದು ತರ್ಕಬದ್ಧವಾಗಿಯೇ ಇರುತ್ತದೆ. ಅದು ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಚೈತನ್ಯಗಳ ಮೂಲಕ ಇಲ್ಲವೆ ಈ ಚೈತನ್ಯಗಳು ಉಪಯೋಗಿಸುವ ಸಾಧನಗಳ ಮೂಲಕ ಕಾರ್ಯ ಮಾಡಬಹುದು, ಇಲ್ಲವೆ ಅದು ನೇರವಾಗಿ ಮನಸ್ಸು, ಪ್ರಾಣ ಹಾಗೂ ಭೌತದ್ರವ್ಯಗಳ ಮೇಲೆ ಅದರದೇ ವಿಶಿಷ್ಟ ಮತ್ತು ಕೂಡಲೆ ಕೈಕೊಳ್ಳಬೇಕಾದ ಕ್ಷೇತ್ರವೆಂದು ಕಾರ್ಯಮಾಡಬಹುದು. ಪ್ರಥಮ ಭಾವನೆಯ ಆಧಾರ (Prima facie) ದ ಮೇಲೆ ಯಾವುದೇ ರೀತಿಯ ಕಾರ್ಯ ಸಾಧ್ಯವಿದೆ. ರೋಗಕ್ಕೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಯಾರೋ ಒಬ್ಬರು ಎರಡು ದಿನಗಳ ಕಾಲ ಅಸ್ವಸ್ಥನಾಗಿರುತ್ತಾನೆ, ದುರ್ಬಲನಾಗಿರುತ್ತಾನೆ, ನೋವು ಜ್ವರಗಳಿಂದ ಬಳಲುತ್ತಿರುತ್ತಾನೆ, ಅವನು ಯಾವ ಔಷಧವನ್ನೂ ತೆಗೆದುಕೊಳ್ಳುವುದಿಲ್ಲ, ಕೊನೆಗೆ ತನ್ನ ಗುರುವಿಗೆ ಚಿಕಿತ್ಸೆ ನೀಡೆಂದು ಕೇಳಿಕೊಳ್ಳುತ್ತಾನೆ. ಮರುದಿನ ಬೆಳಿಗ್ಗೆ ಸ್ವಸ್ಥನಾಗಿ ಎಚ್ಚರಗೊಳ್ಳುತ್ತಾನೆ, ಬಲದಿಂದ ಹಾಗೂ ಚೈತನ್ಯದಿಂದ ಕೂಡಿಕೊಂಡಿರುತ್ತಾನೆ. ತನ್ನ ಮೇಲೆ ಶಕ್ತಿಯೊಂದನ್ನು ಪ್ರಯೋಗಿಸಲಾಯಿತು, ಅದನ್ನು ಅವನಲ್ಲಿ ಇರಿಸಲಾಯಿತು ಮತ್ತು ಆಧ್ಯಾತ್ಮಿಕ ಶಕ್ತಿ ಕಾರ್ಯಮಾಡಿತು ಎಂದು ಅವನು ಯೋಚಿಸುವುದು ಸಮರ್ಥನೀಯವಾಗಿದೆ. ಆದರೆ ಇನ್ನೊಂದು ಸಂದರ್ಭದಲ್ಲಿ ಔಷಧಿಗಳ ಉಪ-ಯೋಗ ಆಗಿರಬಹುದು, ಆದರೆ ಅದೇ ವೇಳೆಗೆ ಭೌತಿಕ ಸಾಧನಕ್ಕೆ ಸಹಾಯ ಸಲ್ಲಿಸಲೆಂದು ಅದೃಶ್ಯ ಶಕ್ತಿಗೆ ಕರೆಕೊಟ್ಟಿರಬಹುದು, ಏಕೆಂದರೆ ಔಷಧಿಗಳು ಚಿಕಿತ್ಸೆ ನೀಡುವುದರಲ್ಲಿ ಯಶಸ್ವಿಯಾಗಬಹುದು ಇಲ್ಲವೆ ಆಗಲಿಕ್ಕಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ–ಅಲ್ಲಿ ನಿಶ್ಚಿತತೆ ಇಲ್ಲ. ಇಲ್ಲಿ ಬಾಹ್ಯದಿಂದ ಅವಲೋಕಿಸುವವನ ತರ್ಕಕ್ಕೆ (ಅವನು ಶಕ್ತಿಯನ್ನಾಗಲಿ, ವೈದ್ಯನ ಸಹಾಯವನ್ನಾಗಲಿ ಉಪಯೋಗಿಸು-ವವನಲ್ಲ, ರೋಗಿಯೂ ಅಲ್ಲ) ರೋಗಿ ಕೇವಲ ಔಷಧಿಗಳಿಂದ ಗುಣಮುಖ-ನಾದನೋ ಅಥವಾ ಔಷಧಿಗಳನ್ನು ಸಾಧನವನ್ನಾಗಿ ಮಾಡಿಕೊಂಡ ಆಧ್ಯಾತ್ಮಿಕ ಶಕ್ತಿಯಿಂದ ಗುಣಮುಖನಾದನೋ ಎಂಬುದು ಅನಿಶ್ಚಿತವಾಗಿಯೇ ಉಳಿಯುತ್ತದೆ. ಇವೆರಡರಲ್ಲಿ ಪ್ರತಿಯೊಂದೂ ಸಾಧ್ಯವಿದೆ. ಔಷಧಿಗಳನ್ನು ಉಪಯೋಗಿಸ-ಲಾಗಿದ್ದರಿಂದ ಆಧ್ಯಾತ್ಮಿಕ ಶಕ್ತಿಯಿಂದಲೇ ರೋಗಿ ಗುಣಮುಖನಾಗಲು ಸಾಧ್ಯ-



ವಾಯಿತೆಂದು ಹೇಳಲಾಗದು ಮತ್ತು ಪ್ರಯೋಗ ಮಾಡಿ ತೋರಿಸುವುದು ಸಾಧ್ಯವಾಗಿರುವುದಿಲ್ಲ. ಇನ್ನೊಂದೆಡೆಗೆ ವೈದ್ಯ ತನ್ನಲ್ಲಿ ಶಕ್ತಿಯೊಂದು ಕಾರ್ಯ ಮಾಡುತ್ತಿರುವುದನ್ನು, ಮಾರ್ಗದರ್ಶನ ಮಾಡುತ್ತಿರುವುದನ್ನು ಅನುಭವಕ್ಕೆ ತಂದು-ಕೊಳ್ಳಬಹುದು ಇಲ್ಲವೆ ವೈದ್ಯಶಾಸ್ತ್ರದ ಪ್ರಕಾರ ನಂಬಲಸಾಧ್ಯವಾದ ತೀವ್ರಗತಿಯಲ್ಲಿ ರೋಗಿ ಗುಣಮುಖನಾಗುತ್ತಿರುವುದನ್ನು ವೈದ್ಯ ನೋಡಬಹುದು.

*

(23/582) ಇದೆಲ್ಲವನ್ನು ನಾನು ನಿನಗೆ ಈಗಾಗಲೆ ವಿವರಿಸಿ ಹೇಳಿದ್ದೇನೆ. ನಿನ್ನಷ್ಟಕ್ಕೆ ನೀನೇ ಏನನ್ನೂ ಮಾಡಲಾರಿ ಎಂಬುದು ಸತ್ಯ, ಆ ಕಾರಣಕ್ಕಾಗಿಯೇ ನೀನು ದೈವೀ ಶಕ್ತಿಯ ಸಂಪರ್ಕದಲ್ಲಿರಬೇಕು. ನೀನೇ ಸ್ವತಃ ನಿನಗಾಗಿ ಮಾಡಲಾಗದ್ದನ್ನು ಮಾಡಲು ಅದು ಅಲ್ಲಿದೆ. ಆ ಶಕ್ತಿಗೆ ಕಾರ್ಯ ಮಾಡಲು ಅನುವು ಮಾಡಿ-ಕೊಡುವುದು ಮತ್ತು ಆ ಶಕ್ತಿಯ ಪರವಾಗಿರುವುದು ನೀನು ಮಾಡಲೇಬೇಕಾದ ಒಂದು ಕಾರ್ಯ. ಅದರರ್ಥ ಆ ಶಕ್ತಿಯಲ್ಲಿ ನಂಬಿಕೆ ಇರಿಸುವುದು, ಅದನ್ನು ನೆಚ್ಚಿಕೊಳ್ಳುವುದು, ನಿನ್ನನ್ನು ತೊಂದರೆಗೆ, ಪೀಡೆಗೆ ಒಳಪಡಿಸದೆ ಇರುವುದು, ಆ ಶಕ್ತಿಯನ್ನು ಅಚಂಚಲನಾಗಿ ನೆನಪಿಗೆ ತಂದುಕೊಳ್ಳುವುದು, ಕರೆಕೊಡುವುದು, ಅದು ಶಾಂತಿಯಿಂದ ಕಾರ್ಯ ಮಾಡಲು ಅನುವು ಮಾಡಿಕೊಡುವುದು ಆಗಿದೆ.

*

## ದೇಹದ ಪ್ರಜ್ಞೆಯನ್ನು ತೆರೆದಿರಿಸುವುದರ ಮೂಲಕ

(24/1576–77) ಗುಣಮುಖವಾಗುವುದಕ್ಕೆ ನಿಜವಾದ ಸಾಧನಗಳೆಂದರೆ ಯಾವಾಗಲೂ ಸರಿಯಾದ ಆಂತರಿಕ ಸ್ಥಿತಿಸ್ಥಾಯಿತ್ವ ಹೊಂದಿರುವುದು, ಬಾಹ್ಯದಲ್ಲಿ, ಅಂತರ್ಯದಲ್ಲಿ ಅಚಂಚಲವಾಗಿರುವುದು, ನಂಬಿಕೆಯಿರುವುದು, ಆಂತರಿಕ ದೇಹ-ಪ್ರಜ್ಞೆಯನ್ನು ಶ್ರೀಮಾತೆಯವರಿಗೆ ಹಾಗೂ ಅವರ ದೈವೀಶಕ್ತಿಗೆ ತೆರೆದಿಡುವುದು ಇವೆಲ್ಲ ಆಗಿರುತ್ತವೆ. – ಇತರ ವಿಷಯಗಳು ಚಿಕ್ಕಪುಟ್ಟ ಸಹಾಯಕ ಸಾಧನಗಳು ಹಾಗೂ ಉಪಾಯಗಳು ಮಾತ್ರ ಆಗಬಲ್ಲವು.

*

(24/1567) ಪ್ರಜ್ಞೆಯ ಹಳೆಯ ರೂಢಿಯಿಂದಾಗಿ ದೇಹ-ಪ್ರಜ್ಞೆ ರೋಗದ ಶಕ್ತಿಗೆ ಶರಣಾಗುತ್ತದೆ ಮತ್ತು ಅದರೊಂದಿಗಿರುವ ಅನುಭವಗಳನ್ನು ಪಡೆಯುತ್ತದೆ ಎಂಬುದು ನಾನು ಹೇಳಿದುದರ ಅರ್ಥವಾಗಿತ್ತು–ಉದಾಹರಣೆಗೆ ಎದೆಯಲ್ಲಿ ಕಫ

ತುಂಬಿಕೊಳ್ಳುವುದು, ಉಸಿರಾಟದ ತೊಂದರೆಯ ಅನುಭವವಾಗುವುದು ಇತ್ಯಾದಿ. ಅದನ್ನು ತೊಡೆದು ಹಾಕಲು ದೇಹದಲ್ಲಿಯೇ ಇರುವ ಸಂಕಲ್ಪ ಹಾಗೂ ಪ್ರಜ್ಞೆಗಳು ಎಚ್ಚರಗೊಳ್ಳುವಂತೆ ಮಾಡಬೇಕು. ಅವು ರೋಗವನ್ನುಂಟು ಮಾಡುವಂತಹ ವಿಷಯಗಳು ತಮ್ಮನ್ನು ದೇಹದ ಮೇಲೆ ಹೇರಲು ಅನುವು ಮಾಡಿಕೊಡುವುದನ್ನು ತಿರಸ್ಕರಿಸುತ್ತವೆ. ಅದನ್ನು ದೊರಕಿಸುವುದು, ಅದರಲ್ಲೂ ಅದನ್ನು ಸಂಪೂರ್ಣವಾಗಿ ದೊರಕಿಸುವುದು ಕಠಿಣವಾದದ್ದು. ಅದರೆಡೆಗೆ ಇರಿಸಬಹುದಾದ ಒಂದು ಹೆಜ್ಜೆಯೆಂದರೆ ಆಂತರಿಕ ಪ್ರಜ್ಞೆ ದೇಹದಿಂದ ಪ್ರತ್ಯೇಕವಾಗುವಂತೆ ಮಾಡುವುದಾಗಿದೆ – ನೀವು ರೋಗಗ್ರಸ್ತರಾಗಿಲ್ಲ; ಆದರೆ ದೇಹದಲ್ಲಿ ಏನೋ ಒಂದು ನಡೆಯುತ್ತಿದೆ ಮತ್ತು ಅದು ನಿಮ್ಮ ಪ್ರಜ್ಞೆಯನ್ನು ಕಲಕುತ್ತಿದೆ ಎಂಬ ಭಾವನೆಯನ್ನು ತಂದುಕೊಳ್ಳು-ವುದಾಗಿದೆ. ಆಗ ಈ ಪ್ರತ್ಯೇಕಗೊಂಡ ದೇಹ–ಪ್ರಜ್ಞೆ ಏನನ್ನು ಅನುಭವಕ್ಕೆ ತಂದು-ಕೊಳ್ಳುತ್ತಿದೆ, ವಿಷಯಗಳಿಗೆ ಅದರ ಪ್ರತಿಕ್ರಿಯೆಗಳೇನು, ಅದು ಹೇಗೆ ಕಾರ್ಯ-ಮಾಡುತ್ತದೆ ಎಂಬುದನ್ನು ನೋಡಲು ಸಾಧ್ಯವಾಗುತ್ತದೆ. ಆಗ ಅದರ ಪ್ರಜ್ಞೆಯನ್ನು ಮತ್ತು ಪ್ರತಿಕ್ರಿಯೆಗಳನ್ನು ಬದಲಿಸುವಂತೆ ಕಾರ್ಯಮಾಡಲು ಮನುಷ್ಯನಿಗೆ ಸಾಧ್ಯವಾಗುತ್ತದೆ.

*

(Evening talks Ed. 1982, p. 167)

**ಪ್ರಶ್ನೆ :** *ಬಹಳಷ್ಟು ಜನರು ಜಡತೆಯನ್ನು ನಿಷ್ಕ್ರಿಯತೆಯೆಂದು ಭಾವಿಸುತ್ತಾರೆ. ನಾನು ಹಾಗೆ ಬಹಳ ಕಾಲದವರೆಗೆ ತಪ್ಪಾಗಿ ತಿಳಿದುಕೊಂಡಿದ್ದೆ. ನನಗೆ ಅನಾ-ರೋಗ್ಯವಾದಾಗ ನಾನು ನಿಷ್ಕ್ರಿಯನಾಗಿರುತ್ತಿದ್ದೆ, ನಂತರ ಅದು ನನ್ನ ಅನಾರೋಗ್ಯ-ವನ್ನು ಒಪ್ಪಿಕೊಂಡ ಹಾಗೆ ಎಂದು ಕಂಡು ಬಂದಿತು.*

**ಶ್ರೀ ಅ :** ನಿಜವಾದ ನಿಷ್ಕ್ರಿಯತೆ ಉಚ್ಚತರ ದೈವೀಶಕ್ತಿಗೆ ತೆರೆದುಕೊಂಡಿರುವುದಾಗಿದೆ, ಅದು ಜಡತೆಯಲ್ಲ.

*

(24/1187) ನಿಷ್ಕ್ರಿಯತೆ ಚಟುವಟಿಕೆಯನ್ನು ನಿಲ್ಲಿಸುವತ್ತ ಕೊಂಡೊಯ್ಯಬಾರದು-ಕೊಂಡೊಯ್ಯದೆ ಹೋದರೆ ಅದು ಸತ್ತೆಯಲ್ಲಿ ಪ್ರೋತ್ಸಾಹ ನೀಡುತ್ತದೆ. ಮೇಲಿನಿಂದ ಬರುವುದಕ್ಕೆ ಕೇವಲ ಆಂತರಿಕ ನಿಷ್ಕ್ರಿಯತೆಯ ಆವಶ್ಯಕತೆ ಇದೆ.–ಜಡತೆಯಿಂದ ಕೂಡಿದ ನಿಷ್ಕ್ರಿಯತೆ ತಪ್ಪಾದದ್ದು.

*



**ಅಭೀಪ್ಸೆ, ಕರೆಕೊಡುವಿಕೆ ಹಾಗೂ ಪ್ರಾರ್ಥನೆಗಳ ಮೂಲಕ**

(23/604–05) ಈ ಯೋಗದಲ್ಲಿ ಇಡೀ ತತ್ವ ಮನುಷ್ಯ ಭಗವಂತನ ಪ್ರಭಾವಕ್ಕೆ ತನ್ನನ್ನು ತೆರೆದಿಟ್ಟುಕೊಳ್ಳುವುದಾಗಿದೆ. ಅದು ನಿಮ್ಮ ಮೇಲ್ಗಡೆಗಿದೆ. ಒಮ್ಮೆ ಅದರ ಬಗ್ಗೆ ಅರಿವು ತಂದುಕೊಂಡ ನಂತರ ಅದು ನಿಮ್ಮೊಳಗೆ ಬರುವಂತೆ ಅದಕ್ಕೆ ಕರೆಕೊಡಬೇಕಾಗುತ್ತದೆ. ಅದು ಮನಸ್ಸಿನಲ್ಲಿ ಮತ್ತು ದೇಹದಲ್ಲಿ ಶಾಂತಿ, ಪ್ರಕಾಶ, ಕಾರ್ಯಕೈಕೊಳ್ಳುವ ದೈವೀ ಶಕ್ತಿ, ರೂಪವಿರುವ ಇಲ್ಲವೆ ರೂಪರಹಿತ ದೈವೀ ಸಾನ್ನಿಧ್ಯ, ದಿವ್ಯಾನಂದ ಇವುಗಳ ರೂಪದಲ್ಲಿ ಇಳಿದು ಬರುತ್ತದೆ. ಮನುಷ್ಯನಿಗೆ ಇದರ ಬಗ್ಗೆ ಅರಿವಾಗುವುದಕ್ಕಿಂತ ಮುಂಚೆ ಅವನಲ್ಲಿ ನಂಬಿಕೆ ಇರಬೇಕು, ಮತ್ತು ತೆರೆದಿರಿಸಿಕೊಳ್ಳುವುದಕ್ಕಾಗಿ ಅಭೀಪ್ಸೆ ಇರಬೇಕು. ಅಭೀಪ್ಸೆ, ಕರೆಕೊಡುವಿಕೆ ಮತ್ತು ಪ್ರಾರ್ಥನೆ ಇವು ಒಂದೇ ವಿಷಯದ ಭಿನ್ನ ರೂಪಗಳು, ಅವೆಲ್ಲವೂ ಪರಿಣಾಮಕಾರಿಯಾಗುತ್ತವೆ. ನಿಮ್ಮತ್ತ ಬರುವ ರೂಪವನ್ನು ಇಲ್ಲವೆ ಯಾವುದು ನಿಮಗೆ ಸುಲಭವೆನಿಸುವುದೋ ಅದನ್ನು ನೀವು ಸ್ವೀಕರಿಸಬಹುದು.

*

(24/1689–90) ಅದು ಸಿದ್ಧಾಂತವಲ್ಲ, ಆದರೆ ಸತತ ಅನುಭವಕ್ಕೆ ಬರು-ವಂತಹದು ಮತ್ತು ಅದು ಬಂದಾಗ ಸ್ಪರ್ಶವೇದ್ಯವಾಗುವಂತಹದು. ನಮ್ಮ ದೇಹದಲ್ಲಿರುವ ಭೌತಿಕ ಪ್ರಜ್ಞೆಯ ಮೇಲ್ಗಡೆ ಶಾಂತಿ, ಪ್ರಕಾಶ, ಸಾಮರ್ಥ್ಯ, ಸಂತೋಷ ಇವುಗಳಿಗೆ ಆಧಾರ ನೀಡುವ ವಿಸ್ತರಣೆ ಇದೆ–ನಾವು ಅದರ ಬಗ್ಗೆ ಅರಿವುಳ್ಳವರಾಗಬಹುದು ಮತ್ತು ಅದನ್ನು ನಮ್ಮ ಭೌತಿಕ ಪ್ರಜ್ಞೆಯಲ್ಲಿ ಕೆಳಗಿಳಿಸಿ ತರಬಹುದು. ಹೀಗೆ ತರುವುದನ್ನು ಮೊದಲು ಕೆಲಕಾಲದವರೆಗೆ, ನಂತರ ಮತ್ತೆ, ಮತ್ತೆ ದೀರ್ಘಕಾಲದವರೆಗೆ ಉಳಿದುಕೊಳ್ಳುವಂತೆ, ಕೊನೆಗೆ ಶಾಶ್ವತವಾಗಿ ಇರು-ವಂತೆ ಮಾಡಬಹುದು. ಹಾಗೆ ಬಂದದ್ದು ನಮ್ಮ ದೈನಂದಿನ ಪ್ರಜ್ಞೆಯ ಆಧಾರವನ್ನು ಬದಲಿಸುವ ರೀತಿಯಲ್ಲಿ ಉಳಿದುಕೊಳ್ಳಬಹುದು. ಅದು ಮೇಲ್ಗಡೆಗಿರುವುದರ ಬಗ್ಗೆ ಅರಿವುಳ್ಳವರಾಗುವುದಕ್ಕಿಂತ ಮೊದಲೂ ಕೂಡ ಒಮ್ಮೆಲೆ ಅದು ಕೆಳಗೆ ಬರುತ್ತಿರು-ವುದರ ಮತ್ತು ನಮ್ಮಲ್ಲಿ ಪ್ರವೇಶಿಸುತ್ತಿರುವುದರ ಭಾವನೆ ತಂದುಕೊಳ್ಳಬಹುದು. ಅದನ್ನು ಕುರಿತು ಅಭೀಪ್ಸೆಪಡುವ ಮನಸ್ಸನ್ನು ಅಚಂಚಲವಾಗಿ ಇರಿಸುವ ಆವಶ್ಯಕತೆ ಇದೆ ಅದರಿಂದಾಗಿ ನಾವು ತೆರೆದಿರಿಸಿಕೊಳ್ಳುವಿಕೆ ಎಂದು ಕರೆಯುವುದು ಸಾಧ್ಯವಾಗುವಂತಾಗುತ್ತದೆ.

**– ಶ್ರೀ ಅರವಿಂದರು**

*

## ಆಂತರಿಕ ಸಾಧನದ ಮೂಲಕ ರೋಗ ಗುಣಪಡಿಸುವುದು

### ಸಂಕಲ್ಪವನ್ನು ಉಪಯೋಗಿಸುವುದರ ಮೂಲಕ

(24/1569) ನಿಶ್ಚಿತವಾಗಿ ಮನುಷ್ಯ ತನ್ನ ರೋಗವೊಂದರ ಮೇಲೆ ಆಂತರಿಕವಾಗಿ ಕಾರ್ಯ ಕೈಕೊಳ್ಳಬಹುದು, ಮತ್ತು ರೋಗ ಗುಣಪಡಿಸಬಹುದು. ಅದು ಯಾವಾಗಲೂ ಅಷ್ಟೊಂದು ಸುಲಭವಾಗಿರುವುದಿಲ್ಲ, ಏಕೆಂದರೆ ಭೌತದ್ರವ್ಯದಲ್ಲಿ ಬಹಳಷ್ಟು ಪ್ರತಿರೋಧವಿರುತ್ತದೆ, ಅದು ಜಡತೆಯ ಪ್ರತಿರೋಧವಾಗಿರುತ್ತದೆ. ದಣಿದುಕೊಳ್ಳದೆ ಪಟ್ಟುಹಿಡಿಯುವುದರ ಆವಶ್ಯಕತೆ ಇದೆ. ಮೊಟ್ಟಮೊದಲಿಗೆ, ಒಟ್ಟಿನಲ್ಲಿ, ಮನುಷ್ಯ ಪೂರ್ತಿ ವಿಫಲನಾಗಬಹುದು, ಇಲ್ಲವೆ ರೋಗ ಲಕ್ಷಣಗಳು ಹೆಚ್ಚಾಗುತ್ತ ಹೋಗಬಹುದು. ಆದರೆ ಕ್ರಮೇಣ ದೇಹದ ಮೇಲಿನ ಇಲ್ಲವೆ ಒಂದು ವಿಶಿಷ್ಟ ರೋಗದ ಮೇಲಿನ ನಿಯಂತ್ರಣ ಬಲವತ್ತರವಾಗುತ್ತ ಹೋಗಬಹುದು. ಯಾವಾಗಾದರೊಮ್ಮೆ ಆಗುವ ರೋಗದ ಆಕ್ರಮಣವನ್ನು ತಡೆಗಟ್ಟುವುದು ತುಲನಾತ್ಮಕವಾಗಿ ಸುಲಭವಾಗಿರುತ್ತದೆ. ಭವಿಷ್ಯತ್ತಿನಲ್ಲಿ ಆ ರೋಗಬರದೆ ಇರುವ ಹಾಗೆ ಪ್ರತಿರಕ್ಷಿತ (immune) ವಾಗುವುದು ಹೆಚ್ಚು ಕಠಿಣವಾದದ್ದು. ಬಹಳ ಕಾಲದಿಂದ ಉಳಿದುಕೊಂಡು ಬಂದ ರೋಗದೊಂದಿಗೆ ವ್ಯವಹರಿಸುವುದು ಹೆಚ್ಚು ಕಠಿಣವಾದದ್ದು. ದೇಹಕ್ಕೆ ಯಾವಾಗಾದರೊಮ್ಮೆ ಬರುವ ರೋಗಕ್ಕಿಂತ ಅದು ಇಡಿಯಾಗಿ ಮಾಯವಾಗುವುದಕ್ಕೆ ಸುಲಭವಾಗಿ ಬಗ್ಗದಂತಹದು. ದೇಹದ ಮೇಲಿನ ನಿಯಂತ್ರಣ ಅಪರಿಪೂರ್ಣವಾಗಿರುವವರೆಗೆ, ಆಂತರಿಕ ಶಕ್ತಿಯನ್ನು ಉಪಯೋಗಿಸುವುದಕ್ಕೆ ಈ ಎಲ್ಲ ಇತರ ಅಪರಿಪೂರ್ಣತೆಗಳು ಮತ್ತು ತೊಂದರೆ-ಗಳು ಅಡ್ಡಿಯನ್ನುಂಟು ಮಾಡುತ್ತವೆ.

ನಿಮ್ಮ ಆಂತರಿಕ ಶಕ್ತಿಯೊಡನೆ ರೋಗ ಉಲ್ಬಣಿಸುವುದನ್ನು ತಡೆದರೆ ಅದೂ ಒಂದು ಸಾಧನೆ ಇದ್ದ ಹಾಗೆ. ನಂತರ ನೀವು ಅಭ್ಯಾಸದ ಮೂಲಕ ರೋಗವನ್ನು ನಿರ್ಮೂಲ ಮಾಡಲು ಸಾಧ್ಯವಾಗುವವರೆಗೆ ಅದರ ಸಾಮರ್ಥ್ಯವನ್ನು ಬಲಪಡಿಸ-ಬೇಕು. ಸಂಪೂರ್ಣ ಸಾಮರ್ಥ್ಯ ಅಲ್ಲಿರದೆ ಇರುವವರೆಗೆ, ಭೌತಿಕ ಸಾಧನಗಳ ಸಹಾಯವನ್ನು ಒಟ್ಟಿನಲ್ಲಿ ತಿರಸ್ಕರಿಸುವ ಆವಶ್ಯಕತೆ ಇಲ್ಲ.

*

(Evening talks, 1982 Ed. p. 29)

**ಪ್ರಶ್ನೆ :** *ಶರೀರಕ್ಕೆ ಬರುವ ರೋಗ ಕುರಿತು ಸಾಧಕನ ಮನೋಭಾವ ಯಾವ ರೀತಿಯದಾಗಿರಬೇಕು?*



**ಶ್ರೀ ಅ :** ಅವನು ಮೊದಲು ಪ್ರಾಣಿಕದ ಸತ್ತೆಯಲ್ಲಿ ಮತ್ತು ಮನಸ್ಸಿನಲ್ಲಿ ಸಂಪೂರ್ಣ-ವಾಗಿ ಅನಾಸಕ್ತಿಯಿಂದ ಇರಬೇಕು. ಪ್ರಕೃತಿಯಲ್ಲಿರುವ ಶಕ್ತಿಗಳ ಕಾರ್ಯಗತಿ-ಯಿಂದಾಗಿ ರೋಗ ಬರುತ್ತದೆ. ಅವನು ರೋಗ ಬರುವುದನ್ನು ನಿರಾಕರಿಸುವುದಕ್ಕೆ ತನ್ನ ಸಂಕಲ್ಪವನ್ನು ದೈವೀಸಂಕಲ್ಪದ ಪ್ರತಿನಿಧಿಯೆಂದು ಉಪಯೋಗಿಸಬೇಕು. ದೈವೀ ಸಂಕಲ್ಪ ಆಧಾರದಲ್ಲಿ ಇಳಿದಾಗ ಅದು ಪರೋಕ್ಷವಾಗಿ ಸಾಧಕನ ಸಂಕಲ್ಪದ ಮೂಲಕ ಕಾರ್ಯಮಾಡುವುದಿಲ್ಲ, ಆದರೆ ನೇರವಾಗಿಯೇ ಕಾರ್ಯಮಾಡುತ್ತದೆ ಮತ್ತು ರೋಗವನ್ನು ತೊಡೆದು ಹಾಕುತ್ತದೆ.

*

(24/1567) ರೋಗಕ್ಕಾಗಿ ಸಂಕಲ್ಪ ಎಂಬುದಕ್ಕೆ ನಾನು ಕೊಟ್ಟ ಅರ್ಥ ಹೀಗಿದೆ : ದೇಹದಲ್ಲಿ ಏನೋ ಒಂದಿದೆ, ಅದು ರೋಗಬರುವುದನ್ನು ಒಪ್ಪಿಕೊಳ್ಳುತ್ತದೆ ಮತ್ತು ಅದರಲ್ಲಿ ಕೆಲವು ಪ್ರತಿಕ್ರಿಯೆಗಳಿರುತ್ತವೆ, ಅವು ಈ ಒಪ್ಪಿಕೊಳ್ಳುವಿಕೆಯನ್ನು ಪರಿಣಾಮಕಾರಿ ಆಗುವಂತೆ ಮಾಡುತ್ತವೆ. – ಹಾಗಾಗಿ ಈ ಅತ್ಯಂತ ಭೌತಿಕ ಒಪ್ಪಿಕೊಳ್ಳುವಿಕೆಯನ್ನು ತೊಡೆದು ಹಾಕಲು ಸತ್ತೆಯ ಪ್ರಜ್ಞಾಪೂರ್ಣ ಭಾಗಗಳಲ್ಲಿ ತದ್ವಿರುದ್ಧವಾದ ಸಂಕಲ್ಪವಿರಬೇಕು.

*

(Evening talks : p. 178-79) ಸಂಕಲ್ಪ ಮಾನಸಿಕ ಪ್ರಯತ್ನವಲ್ಲ, ಅದು ಸಾಮಾನ್ಯವಾಗಿ ಜನರು ತಮ್ಮ ಆಸೆಗಳನ್ನು ತೃಪ್ತಿಪಡಿಸಿಕೊಳ್ಳುವುದಕ್ಕೆ ಉಪ-ಯೋಗಿಸುವ ಪ್ರಾಣಿಕದಿಂದ ಬರುವ ದೂಡುವಿಕೆಯಲ್ಲ. ಅದು ಬಲವತ್ತರವಾದ ಬಯಕೆಯೂ ಅಲ್ಲ. ಸಂಕಲ್ಪ ಒಂದು ಘರ್ಷಣೆಯಲ್ಲ, ಹೆಣಗುವ ಆತಂಕದ ವಿಷಯವಲ್ಲ. ಅದು ಸ್ಥಿರವಾಗಿರುತ್ತದೆ. ಸ್ಥಿರವಾಗಿದ್ದಾಗ, ನಿಜವಾಗಿ, ಅದು ಉಚ್ಚತರ ದೈವೀ ಸಾಮರ್ಥ್ಯ ಕೆಳಗಿಳಿದು ಬಂದು ಕಾರ್ಯ ಮಾಡುವುದಕ್ಕೆ ಕರೆ-ಕೊಡುವುದಾಗಿರುತ್ತದೆ. ಪ್ರಕೃತಿಯ ಮೇಲೆ ಪ್ರಭಾವ ಬೀರಿ ಕಾರ್ಯಮಾಡುವ ಸಂಕಲ್ಪವಿದೆ. ಇನ್ನೊಂದು ಬಗೆಯ ಸಂಕಲ್ಪ ಪ್ರಭಾವ ಬೀರುವುದಕ್ಕಿಂತ ಹೆಚ್ಚಾಗಿ ಪ್ರಾರ್ಥನೆಯ ಮನೋಭಾವದಲ್ಲಿ ಉಚ್ಚತರ ದೈವೀ ಸಾಮರ್ಥ್ಯ ಕೆಳಗಿಳಿದು ಬರಲೆಂದು ಅಭೀಪ್ಸೆಪಡುತ್ತದೆ. ಅತ್ಯುಚ್ಚ ದೈವೀ ಸಂಕಲ್ಪ ಭಗವಂತನ ಸಂಕಲ್ಪ-ವಾಗಿರುತ್ತದೆ. ಎಲ್ಲ ಯಶಸ್ಸಿಗೆ ಆ ಸಂಕಲ್ಪ ಅನಿವಾರ್ಯವಾದದ್ದು, ಅದು ಸ್ವಯಂ-ಚಾಲಿತವೆಂಬಂತೆ ಕಾರ್ಯ ಮಾಡುತ್ತದೆ.

*

## ಕಲ್ಪನೆ ಮತ್ತು ನಂಬಿಕೆಗಳ ಮೂಲಕ

(24/1570) ರೋಗವನ್ನು ಇಲ್ಲವೆ ಭೌತಿಕ ಸತ್ತೆಯ ಅನಾರೋಗ್ಯ ಸ್ಥಿತಿಯನ್ನು ಸೃಷ್ಟಿಸುವ ಸೂಚನೆಗಳು ಸಾಮಾನ್ಯವಾಗಿ ಅವಚೇತನದಿಂದ ಬರುತ್ತವೆ, ಏಕೆಂದರೆ ಭೌತಿಕ ಸತ್ತೆಯ ಬಹುಭಾಗ, ಹೆಚ್ಚಿನ ಮಟ್ಟದಲ್ಲಿ ಭೌತದ್ರವ್ಯವಿರುವ ಭಾಗ, ಅದು ಅವಚೇತನದ್ದಾಗಿರುತ್ತದೆ. ಅದರರ್ಥ ಅದಕ್ಕೆ ಅದರದೇ ಮಬ್ಬಾದ ಪ್ರಜ್ಞೆಯಿರುತ್ತದೆ, ಅದು ತನ್ನಲ್ಲಿಯೇ ಮುಚ್ಚಿ ಹಾಕಿಕೊಂಡಿರುತ್ತದೆ, ಅದರಿಂದಾಗಿ ಮನಸ್ಸಿಗೆ ಅದರಲ್ಲಿ ನಡೆಯುತ್ತಿರುವ ಯಾವ ಚಲನೆಗಳ ಬಗೆಗೂ ಅರಿವುಂಟಾಗುವುದಿಲ್ಲ. ಆದರೆ ಅದು ಹಾಗಿದ್ದರೂ ಅದೊಂದು ಪ್ರಜ್ಞೆ, ಮತ್ತು ಮನಸ್ಸು, ಪ್ರಾಣಿಕಗಳು ಬಾಹ್ಯದಲ್ಲಿರುವ ದೈವೀ ಶಕ್ತಿಗಳ ಸೂಚನೆಗಳನ್ನು ಸ್ವೀಕರಿಸುವಂತೆ ಆ ಪ್ರಜ್ಞೆಯೂ ಮಾಡಬಲ್ಲದು. ಅದು ಹಾಗಿರದಿದ್ದರೆ, ದೈವೀ ಶಕ್ತಿಗಳಿಗೆ ಅದನ್ನು ತೆರೆದಿರಿಸುವ ಮತ್ತು ದೈವೀಶಕ್ತಿ ಅದಕ್ಕೆ ಚಿಕಿತ್ಸೆ ನೀಡುವ ಸಾಧ್ಯತೆ ಇರುತ್ತಿರಲಿಲ್ಲ. ಏಕೆಂದರೆ ಅದರಲ್ಲಿ ಈ ಪ್ರಜ್ಞೆ ಇರದೆ ಹೋದಾಗ ಅದು ಪ್ರತಿಸ್ಪಂದಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಸದ್ಯ ಯುರೋಪ ಮತ್ತು ಅಮೇರಿಕಾ ದೇಶಗಳಲ್ಲಿ ಈ ವಾಸ್ತವತೆಯನ್ನು ಗುರುತಿಸುವ ಹಲವಾರು ಜನರಿದ್ದಾರೆ. ದೇಹಕ್ಕೆ ಪ್ರಜ್ಞಾಪೂರ್ಣ ಮಾನಸಿಕ ಸೂಚನೆಗಳನ್ನು ಕೊಡುವುದರ ಮೂಲಕ ತಮ್ಮ ರೋಗಗಳಿಗೆ ಚಿಕಿತ್ಸೆ ಮಾಡಿಕೊಳ್ಳುತ್ತಾರೆ, ಅವಚೇತನದಲ್ಲಿರುವ ರೋಗ ಕುರಿತು ಮಬ್ಬಾದ ರಹಸ್ಯ ಸೂಚನೆಗಳಿಗೆ ಅವರು ಕೊಡುವ ಸೂಚನೆಗಳು ಪ್ರತಿರೋಧಿಸುತ್ತವೆ. ಫ್ರಾನ್ಸ್ ದೇಶದಲ್ಲಿ ಪ್ರಸಿದ್ಧನಾದ ಒಬ್ಬ ವೈದ್ಯನಿದ್ದ. ಅವನು ಸಾವಿರಾರು ಜನರಿಗೆ, ಅವರ ದೇಹಕ್ಕೆ ರೋಗದ ವಿರುದ್ಧವಾಗಿರುವ ಸೂಚನೆ–ಗಳನ್ನು ಕೊಡುವುದರ ಮೂಲಕ, ಚಿಕಿತ್ಸೆ ಮಾಡಿದ. ರೋಗಕ್ಕೆ ಕೇವಲ ಭೌತಿಕ ಕಾರಣವಿರುವುದಿಲ್ಲ, ಆದರೆ ದೇಹದಲ್ಲಿರುವ ರಹಸ್ಯ ಪ್ರಜ್ಞೆಯಲ್ಲಿ ಪ್ರಕ್ಷುಬ್ಧ ಸ್ಥಿತಿ ಕಾರಣವಾಗಿರುತ್ತದೆಂಬುದನ್ನು ಅದು ಸಿದ್ಧ ಮಾಡಿ ತೋರಿಸುತ್ತದೆ.

*

(24/1589) ಈ ಸ್ವ–ಸೂಚನೆಗಳು (ಮನುಷ್ಯ ತನಗೆ ತಾನೇ ಕೊಡುವ ಸೂಚನೆ–ಗಳು) – ಅವು ಮಾನಸಿಕ ರೂಪವೊಂದರಲ್ಲಿ, ನಿಜವಾಗಿ, ನಂಬಿಕೆಗಳಾಗಿರುತ್ತವೆ. – ಅವು ತಳಶಾಯಿ ಪ್ರಜ್ಞೆಯ ಮೇಲೆ ಹಾಗೂ ಅವಚೇತನದ ಮೇಲೆ ಕಾರ್ಯ ಮಾಡುತ್ತವೆ. ತಳಶಾಯಿ ಪ್ರಜ್ಞೆಯಲ್ಲಿ ಅವು ಆಂತರಿಕ ಸತ್ತೆಯ ಸಾಮರ್ಥ್ಯ, ಯೋಚನೆಯನ್ನು ರೂಪಿಸುವ ಅದರ ರಹಸ್ಯ ಸಾಮರ್ಥ್ಯ, ದೇಹದ ಮೇಲೆ ಪರಿಣಾಮ ಉಂಟುಮಾಡುವ ಶಕ್ತಿ ಅಥವಾ ಸಂಕಲ್ಪ ಇವುಗಳು ಕಾರ್ಯ–ಕೈಕೊಳ್ಳುವಂತೆ ಮಾಡುವವು – ಅವಚೇತನದಲ್ಲಿ ಅವು ಆರೋಗ್ಯವನ್ನು ಮರಳಿ



ಪಡೆಯುವುದನ್ನು ತಡೆಯುವ ಮರಣದ ಇಲ್ಲವೆ ರೋಗದ ಸೂಚನೆಗಳನ್ನು (ಅಭಿವ್ಯಕ್ತಪಡಿಸಿದವಾಗಲಿ, ಪಡಿಸದೆ ಇದ್ದವುಗಳಾಗಲಿ) ನಿಶ್ಯಬ್ದಗೊಳಿಸುತ್ತವೆ ಇಲ್ಲವೆ ತಡೆಹಿಡಿಯುತ್ತವೆ. ಮನಸ್ಸು, ಪ್ರಾಣಿಕ ಹಾಗೂ ದೇಹ ಪ್ರಜ್ಞೆಗಳಲ್ಲಿರುವ ವಿರೋಧೀ ಸೂಚನೆಗಳ ವಿರುದ್ಧ ಹೋರಾಡಲು ಅವು ಸಹಾಯಕವಾಗುತ್ತವೆ. ಇದೆಲ್ಲವನ್ನೂ ಸಂಪೂರ್ಣವಾಗಿ ಕೈಕೊಂಡಾಗ ಇಲ್ಲವೆ ಸ್ವಲ್ಪ ಪ್ರಮಾಣದ ಸಂಪೂರ್ಣತೆ ಇರುವಂತೆ ಮಾಡಿದರೆ ಪರಿಣಾಮಗಳು ಅಸಾಧಾರಣವಾಗಿರುತ್ತವೆ.

*

(23/577–78) ಜೀವಕೋಶಗಳಲ್ಲಿರುವ ನಂಬಿಕೆಯ ಮೂಲಕ ಚಿಕಿತ್ಸೆ ಪಡೆಯುವುದು ವಾಸ್ತವ ಸಂಗತಿ ಮತ್ತು ಪ್ರಕೃತಿಯ ಒಂದು ನಿಯಮ. ಯೋಗಕ್ಕೆ ಹೊರತಾಗಿಯೂ ಕೂಡ ಅದನ್ನು ಹಲವಾರು ಸಲ ಪ್ರಯೋಗ ಮಾಡುವುದರ ಮೂಲಕ ತೋರಿಸಿಕೊಡಲಾಗಿದೆ. ನಂಬಿಕೆ ಮತ್ತು ಅಂತಹ ವಿಷಯಗಳನ್ನು ದೊರಕಿಸುವುದಕ್ಕೆ ಮಾರ್ಗವೆಂದರೆ ಅದನ್ನು ದೊರಕಿಸಲು ಒತ್ತಾಯ ತಂದು–ಕೊಳ್ಳುವುದಾಗಿದೆ ಮತ್ತು ಅದನ್ನು ದೊರಕಿಸುವವರೆಗೆ ಸ್ವಾರಸ್ಯ ಕಳೆದುಕೊಳ್ಳು–ವುದನ್ನು ತಿರಸ್ಕರಿಸಬೇಕು, ನಿರಾಶರಾಗಕೂಡದು, ಬಿಟ್ಟುಕೊಡಕೂಡದು. ಕಠಿಣ ಸಮಸ್ಯೆಗಳಿಂದ ಕೂಡಿದ ಈ ಪೃಥ್ವಿ ತನ್ನ ಮೇಲೆ ಯೋಚಿಸುವ ಹಾಗೂ ಅಭೀಪ್ಸೆಪಡುವ ಪ್ರಾಣಿಗಳನ್ನು ಹೊಂದಲು ಪ್ರಾರಂಭಿಸಿದಂದಿನಿಂದ ಆ ಮಾರ್ಗದ ಮೂಲಕವೆ ಪ್ರತಿಯೊಂದನ್ನು ದೊರಕಿಸಲಾಗಿದೆ. ಅದು ಮನುಷ್ಯ ಯಾವಾಗಲೂ ದೈವೀ ಪ್ರಕಾಶದತ್ತ ತೆರೆದುಕೊಳ್ಳುವುದಾಗಿದೆ ಮತ್ತು ಅವನು ತನ್ನ ಬೆನ್ನನ್ನು ಅಂಧಕಾರದತ್ತ ಹೊರಳಿಸುವುದಾಗಿದೆ. “ನಿನಗೆ ಸಾಧ್ಯವಾಗದು, ನೀನೇನೂ ಮಾಡಲಾರೆ, ನಿನ್ನಲ್ಲಿ ಕ್ಷಮತೆಯಿಲ್ಲ, ನೀನು ಕನಸಿನಲ್ಲಿ ಕಾಣುವ ಒಂದು ಬೊಂಬೆ” ಎಂದು ಹೇಳುವ ಧ್ವನಿಗಳನ್ನು ಪಟ್ಟುಹಿಡಿದು ತಿರಸ್ಕರಿಸಬೇಕು.

ಏಕೆಂದರೆ ಶತ್ರುಗಳ ಧ್ವನಿಗಳಾದ ಅವು ತಮ್ಮ ಕರ್ಕಶ ಕೋಲಾಹಲದ ಮೂಲಕ ಮನುಷ್ಯ ಬರಲಿರುವ ಪರಿಣಾಮದಿಂದ ಕಡಿದುಕೊಳ್ಳುವಂತೆ ಮಾಡುತ್ತವೆ ಮತ್ತು ನಂತರ ತಾವು ಸಮರ್ಥಿಸುವುದಕ್ಕೆ ಪ್ರಮಾಣವೆಂದು ಪರಿ–ಣಾಮದ ಬರಡುತನದತ್ತ ವಿಜಯೋತ್ಸಾಹದಿಂದ ಬೊಟ್ಟು ಮಾಡಿ ತೋರಿಸುತ್ತವೆ. ಪ್ರಯತ್ನದ ತೊಂದರೆಯು ಸುಪರಿಚಿತ ವಿಷಯ, ಆದರೆ ಕಠಿಣವಾದದ್ದು ಅಸಾಧ್ಯ ವಿಷಯವೇನಲ್ಲ. ಕಠಿಣವಾದದ್ದನ್ನೇ ಯಾವಾಗಲೂ ಸಿದ್ಧಿಸಿಕೊಳ್ಳಲಾಗುತ್ತದೆ. ಮತ್ತು ತೊಂದರೆಗಳ ಮೇಲೆ ಜಯ ಸಾಧಿಸುವಿಕೆಯು ಪೃಥ್ವಿಯ ಇತಿಹಾಸದಲ್ಲಿರುವ ಮೌಲಿಕವಾದುದೆಲ್ಲದಕ್ಕೆ ಸರಿದೂಗುತ್ತದೆ.

*

**ದೇಹಕ್ಕೆ ಅಧೀನವಾಗಿರುವುದರಿಂದ ಬಿಡುಗಡೆ ಪಡೆಯುವುದರ ಮೂಲಕ :**

(22/343) ತೋರಿಬರುವುದು ದೈವೀ ಸತ್ಯವಲ್ಲ, ಆತ್ಮವು ದೇಹವಾಗಲಿ, ಪ್ರಾಣ–ವಾಗಲಿ ಇಲ್ಲವೆ ಮನಸ್ಸಾಗಲಿ ಅಲ್ಲ, ಏಕೆಂದರೆ ಇವೆಲ್ಲ ಆತ್ಮದ ರೂಪಗಳು ಎಂದು ಬುದ್ಧಿಮತ್ತೆಯಲ್ಲಿ ನಿರ್ಧಾರಿತವಾದಾಗ ನಮ್ಮ ಮೊದಲನೆಯ ಹೆಜ್ಜೆಯು ನಮ್ಮ ಮನಸ್ಸನ್ನು ಜೀವನ ಹಾಗೂ ದೇಹಗಳೊಂದಿಗಿನ ಅದರ ವ್ಯಾವಹಾರಿಕ ಸಂಬಂಧದಲ್ಲಿ ಸರಿಯಾಗಿರಿಸುವುದಾಗಿರಬೇಕು, ಅದರಿಂದಾಗಿ ಅದು ದಿವ್ಯಾತ್ಮ–ನೊಡನೆ ತನ್ನದೇ ಸರಿಯಾದ ಸಂಬಂಧದತ್ತ ತಲುಪಬಹುದು. ಇದನ್ನು ನಮಗೆ ಈಗಾಗಲೆ ಪರಿಚಿತವಿದ್ದ ಉಪಾಯದ ಮೂಲಕ ಮಾಡುವುದು ಸುಲಭ, ಅದು ಪ್ರಕೃತಿ ಮತ್ತು ಪುರುಷರ ನಡುವೆ ಪ್ರತ್ಯೇಕತೆಯನ್ನು ಸೃಷ್ಟಿಸುವುದಾಗಿದೆ. ಅರಿತುಕೊಂಡಿರುವ ಹಾಗೂ ಆಜ್ಞಾಪಿಸುವ ಪುರುಷ ತನ್ನ ಕಾರ್ಯನಿರ್ವಾಹಕ ಪ್ರಜ್ಞಾಪೂರ್ಣ ಶಕ್ತಿಯ ಕಾರ್ಯಗತಿಗಳಲ್ಲಿ ತೊಡಗಿಸಿಕೊಂಡಿದ್ದಾನೆ, ಅದರಿಂದಾಗಿ ನಾವು ಅವನ ದೇಹವೆಂದು ಕರೆಯುವ ಅದರ ಈ ಭೌತಿಕ ಕಾರ್ಯಗತಿಯನ್ನು ತಾನೇ ಎಂದು ತಪ್ಪಾಗಿ ಭಾವಿಸಿದ್ದಾನೆ. ತನ್ನ ಮನಸ್ಸು ಮತ್ತು ಆತ್ಮ ದೇಹದ ಕಾರ್ಯಗತಿಗೆ ಅಧೀನವಾಗಿರುತ್ತದೆಂದು ಅವನು ನಂಬುತ್ತಾನೆ, ತಾನು ಇದಷ್ಟಲ್ಲದೆ, ಭೌತಿಕ ರೂಪಕ್ಕಿಂತಲೂ ಶ್ರೇಷ್ಠವಾದ ಇನ್ನೂ ಬೇರೆ ಆಗಿದ್ದೇನೆ ಎಂಬುದನ್ನು ಮರೆಯುತ್ತಾನೆ. ಮನಸ್ಸು ಭೌತದ್ರವ್ಯಕ್ಕಿಂತ ಶ್ರೇಷ್ಠವಾದದ್ದು, ಹಾಗಾಗಿ ಭೌತದ್ರವ್ಯದ ಮಬ್ಬಾಗಿರಿಸುವಿಕೆಗಳು, ಪ್ರತಿಕ್ರಿಯೆಗಳು, ಜಡತೆಯ ರೂಢಿ, ಅಸಾಮರ್ಥ್ಯದ ರೂಢಿ ಇವುಗಳಿಗೆ ಅಧೀನನಾಗಬಾರದು ಎಂಬುದನ್ನು ಮತ್ತು ಅವನು ಮನಸ್ಸಿಗಿಂತ ಶ್ರೇಷ್ಠನಾದವನು ಹಾಗಾಗಿ ಮಾನಸಿಕ ಸತ್ತೆಯನ್ನು ಅದರ ಮೇಲ್ಗಡೆಗಿರಿಸುವ ಸಾಮರ್ಥ್ಯ ತನ್ನಲ್ಲಿದೆ ಎಂಬುದನ್ನು, ತಾನು ದೈವೀ ಪ್ರಭು, ವಿಶ್ವಾತೀತನಾದವನು, ಪ್ರಭುವಾದವನು ತನ್ನದೇ ಕಾರ್ಯಗತಿಗಳಿಗೆ ಗುಲಾಮನಾಗಬಾರದು ಎಂಬು–ದನ್ನು, ವಿಶ್ವಾತೀತವಾದದ್ದು ಸೆರೆಗೊಳಗಾಗಿ ತನ್ನದೇ ಸತ್ತೆಯಲ್ಲಿ ಕ್ಷುದ್ರ ಅಸ್ತಿತ್ವ–ದಲ್ಲಿರುತ್ತದೆಂಬುದನ್ನು ಅವನು ಮರೆಯುತ್ತಾನೆ. ಈ ಎಲ್ಲ ಮರೆಗುಳಿತನವನ್ನು ಪುರುಷ ತನ್ನ ನಿಜವಾದ ಸ್ವಭಾವವನ್ನು ನೆನಪಿಗೆ ತಂದುಕೊಳ್ಳುವುದರ ಮೂಲಕ ಮತ್ತು ಮೊದಲು ತನ್ನ ದೇಹ ಕೇವಲ ಒಂದು ಕಾರ್ಯಗತಿ ಮತ್ತು ಪ್ರಕೃತಿಯ ಕೇವಲ ಒಂದು ಕಾರ್ಯಗತಿ ಎಂಬುದನ್ನು ನೆನಪಿಗೆ ತಂದುಕೊಳ್ಳುವುದರ ಮೂಲಕ ಚಿಕಿತ್ಸೆಗೊಳಪಡಿಸಬೇಕು.

*



**ಪ್ರಜ್ಞೆಯ ಒತ್ತಡವನ್ನು ಕೇಂದ್ರೀಕರಿಸುವುದರ ಮೂಲಕ :**

ಪ್ರಜ್ಞೆ ತನ್ನನ್ನು ಎಲ್ಲಿ ಸ್ಥಾಪಿಸುತ್ತದೆ ಮತ್ತು ಏಕಾಗ್ರತೆಗೆ ಒಳಪಡಿಸುತ್ತದೆ ಎಂಬುದರ ಮೇಲೆ ಎಲ್ಲವೂ ಅವಲಂಬಿಸಿದೆ. ಪ್ರಜ್ಞೆ ಅಹಂಕಾರದಲ್ಲಿ ತನ್ನನ್ನು ಸ್ಥಾಪಿಸಿದರೆ ಮತ್ತು ಅಲ್ಲಿ ಏಕಾಗ್ರಗೊಂಡರೆ ನೀವು ನಿಮ್ಮನ್ನು ಅಹಂಕಾರದೊಂದಿಗೆ ಗುರುತಿಸಿಕೊಳ್ಳುತ್ತೀರಿ, ಅದು ಮನಸ್ಸಿನಲ್ಲಿದ್ದರೆ, ಅದನ್ನು ಮನಸ್ಸಿನೊಂದಿಗೆ ಹಾಗೂ ಅದರ ಕಾರ್ಯಕಲಾಪಗಳೊಂದಿಗೆ ಗುರುತಿಸಲಾಗುತ್ತದೆ ಇತ್ಯಾದಿ. ಪ್ರಜ್ಞೆ ತನ್ನ ಒತ್ತಡವನ್ನು ಬಾಹ್ಯದಲ್ಲಿರಿಸಿದರೆ, ಅದು ಬಾಹ್ಯಸತ್ತೆಯಲ್ಲಿ ಜೀವಿಸುತ್ತದೆಂದು ಹೇಳಲಾಗುತ್ತದೆ. ಮತ್ತು ಅದು ತನ್ನ ಆಂತರಿಕ ಮನಸ್ಸು, ಪ್ರಾಣಿಕ ಮತ್ತು ಆಳಾತಿಆಳದಲ್ಲಿರುವ ಚೈತ್ಯ ಇವುಗಳನ್ನು ಮರೆತು ಬಿಡುತ್ತದೆ. ಅದು ಅಂತರಂಗ–ದಲ್ಲಿಳಿದು ಹೋದರೆ ಮತ್ತು ಕೇಂದ್ರೀಕರಿಸುವ ಒತ್ತಡವನ್ನು ಅಲ್ಲಿರಿಸಿದರೆ ತಾನು ಆಂತರಿಕ ಸತ್ತೆ ಎಂದು ತಿಳಿದುಕೊಳ್ಳುತ್ತದೆ, ಅದಕ್ಕಿಂತಲೂ ಹೆಚ್ಚಿನ ಆಳಕ್ಕಿಳಿದು ಹೋದರೆ ತಾನು ಚೈತ್ಯಸತ್ತೆ ಎಂದು ತಿಳಿದುಕೊಳ್ಳುತ್ತದೆ. ಅದು ದೇಹದಿಂದಾಚೆಗೆ ಮೇಲಿನ ಸ್ತರಗಳತ್ತ ಆರೋಹಣ ಮಾಡಿ ಹೋದರೆ ಅಲ್ಲಿ ಆತ್ಮ ಸ್ವಾಭಾವಿಕವಾಗಿ ತನ್ನ ವಿಸ್ತಾರ ಹಾಗೂ ಸ್ವಾತಂತ್ರ್ಯ ಹೊಂದಿರುವುದರ ಅರಿವು ಪಡೆಯುತ್ತದೆ ಮತ್ತು ಅದು ತನ್ನನ್ನು ದಿವ್ಯಾತ್ಮನೆಂದು, ಮನಸ್ಸಾಗಲಿ, ಪ್ರಾಣವಾಗಲಿ, ಇಲ್ಲವೆ ದೇಹವಾಗಲಿ ಅಲ್ಲವೆಂದು ತಿಳಿದುಕೊಳ್ಳುತ್ತದೆ, ಪ್ರಜ್ಞೆಯ ಈ ಒತ್ತಡ ಈ ಎಲ್ಲ ವ್ಯತ್ಯಾಸವನ್ನುಂಟು ಮಾಡುತ್ತದೆ.

*

**ಹಿಂದೆ ಸರಿದು ನಿಲ್ಲುವುದರ (ಅಂತರಂಗದೊಳಗೆ ಸಾಗಿ ಹೋಗುವುದರ) ಮೂಲಕ :**

ಅಂತರಂಗದಲ್ಲಿ ಜೀವಿಸುವುದನ್ನು ಕಲಿತರೆ ನಾವು ನಮ್ಮ ಅಂತರಂಗ–ದಲ್ಲಿರುವ ಸಾನ್ನಿಧ್ಯದ ಅರಿವನ್ನು ತಪ್ಪದೇ ತಂದುಕೊಳ್ಳುತ್ತೇವೆ. ಈ ಸಾನ್ನಿಧ್ಯವೆ ನಮ್ಮ ನಿಜವಾದ ಆತ್ಮ, ಅಗಾಧ ಸಾನ್ನಿಧ್ಯ, ಸ್ಥಿರವಾದದ್ದು, ಸಂತೋಷಕರವಾದದ್ದು, ಜಗತ್ತಿನ ಆಡಳಿತಕ್ಕೆ ಒಳಗಾಗದಷ್ಟು ಬಲಿಷ್ಠವಾದದ್ದು – ಈ ಸಾನ್ನಿಧ್ಯ ಸ್ವಯಂ ಭಗವಂತನದೇ ಆಗಿರದಿದ್ದರೆ, ಅದು ಅಂತರಂಗದಲ್ಲಿರುವ ಪ್ರಭುವಿನ ತೇಜಸ್ಸಾ–ಗಿರುತ್ತದೆ. ತೋರಿಕೆಯ ಮತ್ತು ಮೇಲ್ಮೈಯ ಆತ್ಮಕ್ಕೆ ಆಧಾರ ಮತ್ತು ಸಹಾಯ ನೀಡುತ್ತಿರುವ ಅದರ ಸುಖ–ದುಃಖಗಳತ್ತ ಚಿಕ್ಕ ಮಗುವಿನ ದೋಷ ಮತ್ತು ಭಾವೋದ್ರೇಕಗಳನ್ನು ನೋಡುವ ರೀತಿಯಲ್ಲಿ ನೋಡಿ ಆಂತರಿಕವಾಗಿ ಮುಗುಳ್ನ–ಗುತ್ತ ಇರುವ ಅದರ ಬಗ್ಗೆ ಅರಿವುಳ್ಳವರಾಗುತ್ತೇವೆ. ಮತ್ತು ನಾವು ನಮ್ಮೊಳಗೆ

ಮರಳಿ ಹೋಗಲು, ಹಾಗೂ ನಮ್ಮನ್ನು ಗುರುತಿಸಲು ಸಾಧ್ಯವಾದರೆ, ಅದನ್ನು ಮೇಲ್ಮೈ ಅನುಭವದಿಂದ ಮಾಡದೆ ಭಗವಂತನ ಅರೆನೆರಳಿನ ತೇಜಸ್ಸಿನಿಂದ ಮಾಡಿದರೆ, ಜಗತ್ತಿನೊಡನೆ ಬರುವ ಸಂಪರ್ಕಗಳೊಂದಿಗೆ ನಾವು ಆ ಮನೋಭಾವದಲ್ಲಿ ಜೀವಿಸಬಹುದು. ನಮ್ಮ ಇಡೀ ಪ್ರಜ್ಞೆಯಲ್ಲಿ ದೇಹದ, ಮನಸ್ಸಿನ, ಪ್ರಾಣಿಕದ ಸಂತೋಷ ಹಾಗೂ ವೇದನೆಗಳಿಂದ ಹಿಂತಿರುಗಿ ನಿಂತು ಅವುಗಳನ್ನು ಅನುಭವಗಳೆಂದು ವಶವರ್ತಿ ಮಾಡಿಕೊಳ್ಳಬಹುದು. ಮೇಲ್ಮೈಯಲ್ಲಿರುವ ಅವುಗಳ ಸ್ವಭಾವ ನಮ್ಮ ತಿರುಳನ್ನು, ನಿಜವಾದ ಸತ್ತೆಯನ್ನು ಸ್ಪರ್ಶಿಸುವುದಿಲ್ಲ, ಇಲ್ಲವೆ ಅದರ ಮೇಲೆ ತನ್ನನ್ನು ಹೇರುವುದಿಲ್ಲ. ಇದನ್ನು ಇಡಿಯಾಗಿ ಅಭಿವ್ಯಕ್ತಗೊಳಿಸುವ ಸಂಸ್ಕೃತ ಶಬ್ದಗಳಲ್ಲಿ ಹೇಳುವುದಾದರೆ 'ಮನೋಮಯ'ದ ಹಿಂದಿರುವ 'ಆನಂದಮಯ', ಸೀಮಿತ ಮಾನಸಿಕ ಆತ್ಮದ ಹಿಂದಿರುವ ವಿಶಾಲವಾದ ದಿವ್ಯಾನಂದದ ದಿವ್ಯಾತ್ಮ. ಮಾನಸಿಕ ಆತ್ಮ ದಿವ್ಯಾತ್ಮದ ಕ್ಷೋಭೆಗೊಂಡ ಪ್ರತಿಫಲನ ಮಾತ್ರ. ನಮ್ಮ ಬಗೆಗಿನ ಸತ್ಯ ನಮ್ಮ ಅಂತರಂಗದಲ್ಲೇ ಇದೆ, ಅದು ಮೇಲ್ಮೈಯಲ್ಲಿಲ್ಲ.

*

(24/1457) ಶಾಂತಿ ಮತ್ತು ಸ್ವಯಂಸ್ಫೂರ್ತಿಯ ಜ್ಞಾನ ಚೈತ್ಯಸತ್ತೆಯಲ್ಲಿವೆ. ಮತ್ತು ಅವು ಅಲ್ಲಿಂದ ಮನಸ್ಸು, ಪ್ರಾಣಿಕ ಹಾಗೂ ಭೌತಿಕಗಳತ್ತ ಹರಡುತ್ತವೆ. ನಮ್ಮ ಬಾಹ್ಯ ಭೌತಿಕ ಪ್ರಜ್ಞೆಯಲ್ಲಿ ತೊಂದರೆ ಇನ್ನೂ ಪಟ್ಟು ಹಿಡಿದು ಉಳಿದುಕೊಳ್ಳಲು ಪ್ರಯತ್ನಿಸುತ್ತದೆ ಮತ್ತು ತಳಮಳವನ್ನು ಕೆಲವೊಮ್ಮೆ ಭೌತಿಕ ಮನಸ್ಸಿನಲ್ಲಿ, ಕೆಲವೊಮ್ಮೆ ನರಗಳಲ್ಲಿ, ಇನ್ನೂ ಕೆಲವೊಮ್ಮೆ ದೈಹಿಕ ತೊಂದರೆಗಳ ಮೂಲಕ ದೇಹದಲ್ಲಿ ತರುತ್ತದೆ. ಇವೆಲ್ಲವೂ ಹೊರಟು ಹೋಗಬಲ್ಲವು, ಹೋಗಲೇಬೇಕು. ಶಾಂತಿ ಮತ್ತು ಸಾಮರ್ಥ್ಯ ನರಗಳಲ್ಲಿ, ಭೌತಿಕ ಜೀವಕೋಶಗಳಲ್ಲಿ ಬೆಳೆದ ಹಾಗೆ ಹೊಟ್ಟೆನೋವು, ಕಣ್ಣುಗಳ ದೌರ್ಬಲ್ಯ ಮತ್ತು ಉಳಿದೆಲ್ಲ ರೋಗಗಳು ಕೂಡ ಪೂರ್ತಿಯಾಗಿ ಹೊರಟು ಹೋಗುವವು.

**– ಶ್ರೀ ಅರವಿಂದರು**

## ಸಂತೋಷಕರ ಶಾಂತಿ, ಪ್ರಕಾಶಮಯ ಹಾಗೂ ಬದಲಾಗದ ಪ್ರಶಾಂತತೆ ಇವುಗಳಿಗಾಗಿ

(Feb. 27, 1914) ಓ, ಪ್ರಭು ತಮ್ಮ ಜೀವನದಲ್ಲಿ ಇಡಿಯಾಗಿ ನಿನಗೆ ಮುಡುಪಾ–ಗಿರಿಸಿಕೊಂಡವರ ಅದೃಷ್ಟದಲ್ಲಿರುವ ಆನಂದದ ಭಾವನೆ ನನಗೆ ಬರುತ್ತಿದೆ. ಇದು ಬಾಹ್ಯ ಪರಿಸ್ಥಿತಿಗಳ ಮೇಲೆ ಅವಲಂಬಿಸಿರುವುದಿಲ್ಲ, ಆದರೆ ಮನುಷ್ಯನದೇ ಸ್ವತಃ



ಸತ್ತೆಯ ಸ್ಥಿತಿಯ ಮೇಲೆ ಮತ್ತು ಹೆಚ್ಚಿನ ಅಥವಾ ಕಡಿಮೆ ರೀತಿಯಲ್ಲಿ ಆ ಸ್ಥಿತಿ ಪ್ರಕಾಶ ಪಡೆದುದರ ಮೇಲೆ ಅವಲಂಬಿಸಿರುತ್ತದೆ. ನಿನ್ನ ನಿಯಮಕ್ಕೆ ಸಂಪೂರ್ಣ–ವಾಗಿ ಮುಡುಪಾಗಿರಿಸಿಕೊಂಡಿರುವಿಕೆ ಪರಿಸ್ಥಿತಿಗಳ ಒಟ್ಟು ಮೊತ್ತದಲ್ಲಿ ಮಾರ್ಪಾಡು ತರದೆ ಇರಲಾರದು, ಆದಾಗ್ಯೂ ಈ ಪರಿಪೂರ್ಣ ಮುಡುಪಾಗಿರಿಸಿ–ಕೊಳ್ಳುವಿಕೆಯನ್ನು ಇವುಗಳಿಂದ ಸಾಧ್ಯವಾಗುವಂತೆ ಮಾಡಲಾಗದು, ಅಭಿವ್ಯಕ್ತ–ಪಡಿಸಲಾಗದು. ಇದರರ್ಥ ಯಾವಾಗಲೂ ಎಲ್ಲರಿಗೂ ಒಂದೇ ಆಗಿರುವ ಕೆಲವೊಂದು ಪರಿಸ್ಥಿತಿಗಳಡಿಯಲ್ಲಿ ನಿನ್ನ ನಿಯಮವನ್ನು ಪ್ರಕಟಿಸಲಾಗದು, ಏಕೆಂದರೆ ಪ್ರತಿಯೊಬ್ಬನಿಗೂ, ಅವನ ಮನೋಭಾವಕ್ಕನುಗುಣವಾಗಿ, ಈ ಪ್ರಕಟಣೆ ಭಿನ್ನವಾಗಿರುತ್ತದೆ, ಅಂದರೆ ಅದು ಅವನ ಭೌತಿಕ ಜೀವನದಲ್ಲಿ ಸದ್ಯ ಅವನಿಗೆ ವಹಿಸಿಕೊಟ್ಟ ಮಣಿಹಕ್ಕೆ ಅನುಸಾರವಾಗಿ ಇರುತ್ತದೆ.

ಆದರೆ, ಬದಲಾಗದಂತಹದು ಮತ್ತು ವಿಶ್ವಂಭರವಾದದ್ದು ಯಾವುದೆಂದರೆ ನಿನಗೆ ಇಡಿಯಾಗಿ ಮುಡುಪಾಗಿರಿಸಿಕೊಂಡವರ ಸಂತೋಷಕರ ಶಾಂತಿ ಮತ್ತು ಬದಲಾವಣೆಗೆ ಅವಕಾಶಕೊಡದ ಪ್ರಶಾಂತತೆ, ಅವರಲ್ಲಿ ಇನ್ನು ಮುಂದೆ ಯಾವುದೇ ಬಗೆಯ ಅಂಧಕಾರವಾಗಲಿ, ಅಜ್ಞಾನವಾಗಲಿ, ಅಹಂಕಾರದಿಂದ ಕೂಡಿದ ಆಸಕ್ತಿಯಾಗಲಿ, ಕೆಟ್ಟ ಸಂಕಲ್ಪವಾಗಲಿ ಇರುವುದಿಲ್ಲ.

ಓ, ಎಲ್ಲರೂ ಈ ದೈವೀ ಶಾಂತಿಗೆ ಎಚ್ಚತ್ತುಕೊಳ್ಳುವಂತಾಗಲಿ.

**– ಶ್ರೀಮಾತೆ**

*

## ಆಶ್ರಮವಾಸಿಯಾದ ಜಾನಿನಾ ಸ್ಟ್ರೋಕಾ (Janina Stroka) ತನ್ನ ಡಚ್ ಗೆಳತಿಗೆ 1957ರಲ್ಲಿ ಬರೆದ ಪತ್ರದಿಂದ ಎತ್ತಿ ತೆಗೆದ ಭಾಗ

(ಮೂಲ : A Captive of Her Love : Ashram Publication)

"ಇಂದು ಮುಂಜಾನೆ ಶ್ರೀಮಾತೆಯವರು ನನ್ನ ಹೃದಯದಲ್ಲಿ ಇರುವುದನ್ನು ಗಮನಿಸಿದೆ. ಅವರು ಅಲ್ಲಿ ತಮ್ಮೆಲ್ಲ ವೈಭವದೊಂದಿಗೆ ಇದ್ದಾರೆ. ಮತ್ತು ತಮ್ಮದೇ ಮನೆಯಲ್ಲಿ ಮಾಡುವ ಹಾಗೆ ಮಂದಸ್ಮಿತರಾಗಿ ಮೌನದಿಂದ ತಮ್ಮ ಕಾರ್ಯ ಮಾಡುತ್ತಾರೆ. ನಾನೀಗ ಏನು ಮಾಡಲಿ ಎಂದು ಅವರನ್ನು ಕೇಳಿದೆ. ಅವರೆದುರು ಸಾಷ್ಟಾಂಗ ಪ್ರಣಾಮ ಮಾಡಬೇಕು ಮತ್ತು ಅತ್ಯಂತ ವಿನಯದಿಂದ ಅವರ

ಕಾರ್ಯಗಳನ್ನು ವೀಕ್ಷಿಸಬೇಕು. ಈಗ ನನ್ನ ಎಲ್ಲ ಚಲನೆಗಳು ಬದಲಾಗುವವು, ಅವು ಹೆಚ್ಚು ಕೋಮಲ ಹಾಗೂ ಹೆಚ್ಚು ಸೂಕ್ಷ್ಮವಾಗುವವು, ಏಕೆಂದರೆ ಶ್ರೀಮಾತೆ ಈಗ ಈ ದೇಹದಲ್ಲಿದ್ದಾರೆ ಮತ್ತು ಈ ದೇಹ ಅತ್ಯಂತ ಕಾಳಜಿಯಿಂದ ಹಾಗೂ ಪ್ರೇಮದಿಂದ ಅವರನ್ನು ಕೊಂಡೊಯ್ಯಲು ಪ್ರಯತ್ನಿಸುವುದು."

"ಈಗ ಈ ಮನೆಯಿಂದ (ದೇಹದಿಂದ) ಹೊರಗೆ ಹೋಗುವುದಕ್ಕೆ ಕಾಲ ಸನ್ನಿಹಿತವಾಗಿದೆ. ಇಂದು ಮುಂಜಾನೆ ಶ್ರೀಮಾತೆ ಹಾಗೆ ನನಗನಿಸುವಂತೆ ಮಾಡಿದರು. ಬಹಳ ಕಾಲದವರೆಗೆ ಅವರು ಈ ಒಣಹೆಮ್ಮೆಯ ನಿವಾಸಿಯನ್ನು ಸಹಿಸಿಕೊಂಡಿದ್ದರು. ತಾನೇ ಈ ಮನೆಯ ನಿಜವಾದ ಯಜಮಾನ ಎಂದು ಅವನು ಕಲ್ಪಿಸಿಕೊಂಡಿದ್ದನು. ತನ್ನನ್ನು ಅವನು ತಾನೇ ಒಬ್ಬ ಮೂರ್ಖನನ್ನಾಗಿ ಮಾಡುವಂತೆ ಶ್ರೀಮಾತೆಯವರು ಮಾಡಿದರು. ಆದರೆ ಈಗ ಅದು ಸಾಕು ಎಂದು ಅವರು ಹೇಳಿದರು. ನಾನು ಕೇವಲ ಅವರ ದಾರಿಗಡ್ಡವಾಗಿ ನಿಲ್ಲುತ್ತಿದ್ದೇನೆ ಎಂಬುದನ್ನು ಅವರು ವಿಧಿಬದ್ಧವಾಗಿ ತೋರಿಸಿಕೊಟ್ಟರು. ಸುಮಾರಾಗಿ ನಾನು ಕೈಕೊಂಡ ಪ್ರತಿಯೊಂದು ಕಾರ್ಯ–ಅದು ವ್ಯಾಯಾಮ ಮಾಡುತ್ತಿರುವುದಾಗಲಿ, ರಸ್ತೆಯ ಮೇಲೆ ನಡೆದಾಡುತ್ತಿರುವುದಾಗಲಿ, ಜನರ ಬಗ್ಗೆ ನನ್ನ ಮನೋಭಾವವಾಗಲಿ, ಕಾರ್ಯ ಕೈಕೊಳ್ಳುತ್ತಿರುವಾಗ ಆಗಲಿ ಇಲ್ಲವೆ ಬಣ್ಣದ ಚಿತ್ರ ಬಿಡಿಸುತ್ತಿರುವಾಗ ಆಗಲಿ, ನನ್ನನ್ನು ಅದರಲ್ಲಿ ಬೆರೆಸುವುದರ ಮೂಲಕ ನಾನು ಅದನ್ನು ಹೇಗೆ ಹಾಳು ಮಾಡಿದೆ ಎಂಬುದನ್ನು ತೋರಿಸಿಕೊಟ್ಟರು. ಓ, ಅದು ಪ್ರೀತಿಸುವ ಶಿಕ್ಷಕಿ ನನ್ನತ್ತ ಬಾಗಿಕೊಂಡು ನಾನು ಕಲಿಯಬೇಕಾದ ಪಾಠಗಳನ್ನು ಅನಂತ ತಾಳ್ಮೆಯಿಂದ ಹಾಗೂ ಪ್ರೀತಿಯಿಂದ ಕಲಿಸಿಕೊಡುವಂತಿತ್ತು. ಶ್ರೀಮಾತೆಯವರೆದುರು ಬಹು–ಮಟ್ಟಿಗೆ ಸಾಮಾನ್ಯವಾಗಿ, ಸತತವಾಗಿ ಸಾಷ್ಟಾಂಗವೆರಗುತ್ತಿರುವ ಮನೋಭಾವನೆ ನನ್ನಲ್ಲಿದೆ ಎಂಬುದರ ಅರಿವು ಇಂದು ನನಗಾಯಿತು."

"ನನ್ನ ಜೀವನವನ್ನು ತುಂಬಿಕೊಂಡಿರುವ, ದುಃಖಕ್ಕೀಡು ಮಾಡುವ, ತೊಂದರೆಯನ್ನುಂಟು ಮಾಡುವ, ನಾನು ಮುಂದೇನು ಮಾಡಬೇಕು, ಮುಂದೇ–ನಾಗುವುದು ಎಂದು ಯೋಚಿಸುವಂತೆ ಮಾಡುವ ಲಕ್ಷಾನುಗಟ್ಟಲೆ ಯೋಚನೆಗಳು ಎಷ್ಟು ನಿಷ್ಪ್ರಯೋಜಕವಾದವುಗಳು ಎಂಬುದನ್ನು ನಾನೀಗ ನೋಡುತ್ತಿದ್ದೇನೆ. ಮನುಷ್ಯ ತನ್ನನ್ನು ಹಾಳು ಮಾಡುವುದು, ಪೋಲು ಮಾಡುವುದು ಎಂದು ಅವರು ಹೇಳುತ್ತಿದ್ದುದು ನನಗೀಗ ಅರ್ಥವಾಗುತ್ತಿದೆ, ಅದು ಅವರತ್ತ ಹೊರಳುವುದರ ಬದಲಾಗಿ ಈ ರೀತಿ ಅತ್ತ, ಇತ್ತ ನಿಷ್ಪ್ರಯೋಜಕ ಯೋಚನೆಗಳಲ್ಲಿ ಹೊರಳಾಡು–ತ್ತಿರುವುದಾಗಿದೆ. ಅವರತ್ತ ಹೊರಳುವಿಕೆ ಮಾತ್ರ ಇರಬೇಕು, ಮನುಷ್ಯ ತನ್ನೆಲ್ಲ



ಕೇಂದ್ರಗಳನ್ನು, ತಾನೇನಾಗಿರುವನೋ ಅದನ್ನು, ತನ್ನಲ್ಲಿ ಇರುವುದೆಲ್ಲವನ್ನು ಅವರಿಗೆ ಅರ್ಪಿಸಿಬಿಡಬೇಕು."

"ನನ್ನ ಯೋಗ, ನನ್ನ ಪ್ರಗತಿ ಇತ್ಯಾದಿ ವಿಷಯಗಳನ್ನು ಕುರಿತು ಯೋಚಿಸುವುದನ್ನು ನಾನೀಗ ನಿಲ್ಲಿಸಿಬಿಟ್ಟಿದ್ದೇನೆ. ಶ್ರೀಮಾತೆಯವರು ನನ್ನಲ್ಲಿ ನಡೆಸುತ್ತಿರುವ ಕಾರ್ಯಗತಿಯ ಬಗ್ಗೆ ಅರಿವುಳ್ಳವಳಾಗಬೇಕು, ಪ್ರತಿಯೊಂದು ಚಿಕ್ಕ ವಿಷಯವನ್ನೂ ಕೂಡ ಅವರಿಗೆ ಯಜ್ಞರೂಪದಲ್ಲಿ ಅರ್ಪಿಸಬೇಕು ಮತ್ತು ನಾನು ಅವರೊಂದಿಗೆ ಏಕತೆ ಪಡೆಯಬೇಕು ಎಂಬ ಅಭೀಪ್ಸೆ ಮಾತ್ರ ನನ್ನಲ್ಲಿದೆ. ನಾನು ಅವರಿಗೆ ಶರಣಾಗುತ್ತೇನೆ."

"ಶ್ರೀಮಾತೆಯವರಿಗೆ ಅರ್ಪಿಸಬೇಕಾದದ್ದು ನನ್ನಲ್ಲಿ ಇನ್ನೂ ಬಹಳಷ್ಟಿದೆ, ಎಂಬುದು ನನಗೆ ತಿಳಿದಿದೆ, ಆದರೆ ಅದು ಈಗ ಬಹಳ ತರ್ಕಬದ್ಧವಾಗಿರುವಂತೆ ತೋರಿಬರುತ್ತದೆ–ಹಾಗೆಯೇ ಮುಂದುವರಿಯುತ್ತ ಹೋಗಬೇಕಾಗುತ್ತದೆ : ಇದನ್ನು ಕೊಡುವುದರಿಂದ ನನ್ನಲ್ಲಿ ಸ್ವಲ್ಪ ಕಡಿಮೆಯಾಗುತ್ತದೆ, ಮತ್ತು ಇನ್ನಷ್ಟು ಕೊಡುವು–ದರಿಂದ ಇನ್ನೂ ಕಡಿಮೆಯಾಗುತ್ತದೆ ಮತ್ತು ಹೀಗೆ ಕ್ರಮೇಣ ನನ್ನಲ್ಲಿ ಏನೂ ಉಳಿಯದಂತಹ ಕ್ಷಣ ಬರುತ್ತದೆ, ಏಕೆಂದರೆ ಅವರು ನನ್ನದೆಲ್ಲವನ್ನೂ ತೆಗೆದು–ಕೊಂಡು ಬಿಟ್ಟಿರುತ್ತಾರೆ. 'ಪರಮೋಚ್ಚ ದೈವೀ ಪ್ರೇಮ ಪ್ರತಿಯೊಂದನ್ನು ಅರಿತು–ಕೊಂಡಿರುತ್ತದೆ ಮತ್ತು ಪ್ರತಿಯೊಂದನ್ನು ಮಾಡಬಲ್ಲದು' ಎಂದು ಶ್ರೀಮಾತೆಯವರು ಹೇಳಿದ್ದಾರೆ. ಇಂತಹ ಸಂದರ್ಭದಲ್ಲಿ ನನ್ನಲ್ಲಿಯೇ–ಈ ಚಿಕ್ಕ ನಾನು ಎಂಬುದರಲ್ಲಿ–ಮಗ್ನವಾಗಿರುವುದು ಒಂದು ಅಪರಾಧ ಮತ್ತು ಮೂರ್ಖತನವಾಗಿರುತ್ತದೆ."

*

## ವಾರ್ತಾಪತ್ರ

**ಶ್ರೀ ಅರವಿಂದಾಶ್ರಮದಲ್ಲಿ ದರ್ಶನ ದಿನಗಳಂದು ವಿತರಿಸಿದ ಸಂದೇಶಗಳು:**
**ನವ್ಹೆಂಬರ 17, 2010: ಶ್ರೀಮಾತೆಯವರ ಮಹಾಸಮಾಧಿ ದಿನ.**

ಯಾವುದೇ ಸಮಯದಲ್ಲಿ ಆಳವಾದ ದುಃಖ, ಸುಡುವ ಸಂಶಯ ಇಲ್ಲವೆ ತೀವ್ರವಾದ ನೋವು ನಿಮ್ಮ ಮೇಲೆ ಆಕ್ರಮಣ ಮಾಡಿದಾಗ ಮತ್ತು ನಿಮ್ಮನ್ನು ನಿರಾಶೆಗೊಳಪಡಿಸಿದಾಗ ವಿಫಲವಾಗದ ಸ್ಥಿರತೆಯನ್ನು ಮತ್ತು ಶಾಂತಿಯನ್ನು ಮರಳಿ ಪಡೆಯಲು ಮಾರ್ಗವೊಂದಿದೆ:

ನಿಮ್ಮ ಸತ್ತೆಯ ಆಳಗಳಲ್ಲಿ ಜ್ಯೋತಿಯೊಂದು ಬೆಳಗುತ್ತಿದೆ, ಅದರ ಉಜ್ವಲ ಬೆಳಕಿಗೆ ಸಮಾನವಾದುದು ಕೇವಲ ಅದರ ಪರಿಶುದ್ಧತೆ. ಅದು ಪ್ರಜ್ಞಾಪೂರ್ಣ ವಿಶ್ವಂಭರ ದೇವನ ಜೀವಂತ ಹಾಗೂ ಪ್ರಜ್ಞೆಯುಳ್ಳ ಭಾಗ. ಆ ದೇವನು ಭೌತದ್ರವ್ಯವನ್ನು ಚಾಲನೆಗೊಳಪಡಿಸುವನು, ಪೋಷಿಸುವನು, ಪ್ರಕಾಶಮಯ-ವಾದದ್ದನ್ನಾಗಿ ಮಾಡುವನು. ಅವನ ನಿಯಮವನ್ನು ಪಾಲಿಸುವವರಿಗೆ ಅವನು ವಿಫಲನಾಗದ ಮಾರ್ಗದರ್ಶಿ, ಯಾರು ಅವನನ್ನು ನೋಡಲು, ಅವನ ಮಾತು-ಗಳನ್ನು ಕೇಳಲು ಮತ್ತು ಅವನಿಗೆ ವಿಧೇಯರಾಗಿರಲು ಅಭೀಪ್ಸೆಪಡುವರೋ ಅಂಥವರಿಗೆ ಅವನು ಪ್ರೀತಿಪೂರ್ವಕ ಸಹನಶೀಲತೆಯಿಂದ ಸಾಂತ್ವನ ನೀಡುವ ಸಹಾಯಕನಾಗಿರುತ್ತಾನೆ. ನಿಷ್ಕಪಟವಾದ ಹಾಗೂ ತಾಳಿಕೊಳ್ಳುವ ಯಾವ ಅಭೀಪ್ಸೆಯೂ ವ್ಯರ್ಥವಾಗುವುದಿಲ್ಲ, ದೃಢವಾದ ಮತ್ತು ಗೌರವಪೂರ್ಣವಾದ ಯಾವ ನಂಬಿಕೆಯೂ ನಿರಾಶೆಗೊಳಗಾಗುವುದಿಲ್ಲ, ಯಾವ ನಿರೀಕ್ಷೆಗೂ ಮೋಸ-ವಾಗುವುದಿಲ್ಲ.

**– ಶ್ರೀಮಾತೆ**

*

**ನವ್ಹೆಂಬರ 24, 2010: ಸಿದ್ಧಿಯ ದಿನ.**

ಪಶುಗಳ ಹಾಗಿರುವ ನಮ್ಮ ಉತ್ಕ್ರಾಂತಿ ಇನ್ನೂ ಜಯಿಸಿ ಪಡೆದು-ಕೊಳ್ಳಲಾಗಿರದ ಹರವುಗಳಲ್ಲಿ ಎಂತಹ ಸಂತೋಷಗಳು, ಎಂತಹ ಪರಿಪೂರ್ಣ ಶಕ್ತಿಗಳು, ಸ್ವಯಂ ಪ್ರೇರಣೆಯಿಂದ ಬರುವ ಎಂತಹ ಪ್ರಕಾಶಮಯ ಜ್ಞಾನದ ನಿರಂತರ ವಿಸ್ತಾರಗಳು, ಎಂತಹ ವಿಶಾಲವಾದ ಪ್ರಶಾಂತತೆಗಳು ನಮಗಾಗಿ ಕಾದು-ಕೊಂಡಿವೆ ಎಂಬುದನ್ನು ಮಾನವರು ಒಂದು ಕ್ಷಣ ಕಾಣಿಸಿಕೊಂಡು ಮಾಯ-



ವಾಗುವ ಅನುಭವವನ್ನು ಪಡೆದರಾದರೆ, ಈ ಅಮೂಲ್ಯ ಸಂಪತ್ತನ್ನು ಪಡೆಯುವ-ವರೆಗೆ ಅವರು ಎಂದಿಗೂ ವಿಶ್ರಾಂತಿಯಲ್ಲಿರಲಾರರು.

– ಶ್ರೀ ಅರವಿಂದರು.

*

**ಡಿಸೆಂಬರ 5, 2010: ಶ್ರೀ ಅರವಿಂದರ ಮಹಾಸಮಾಧಿಯ ದಿನ.**

ಶ್ರೀ ಅರವಿಂದರಿಗೆ ಕೃತಜ್ಞತೆಯನ್ನು ಅರ್ಪಿಸಲು ನಾವು ಅವರ ಬೋಧನೆ-ಗಳ ಜೀವಂತ ನಿದರ್ಶನವಾಗುವುದರ ಹೊರತಾಗಿ ಬೇರೇನನ್ನೂ ಮಾಡಲಾರೆವು.

– ಶ್ರೀಮಾತೆ

*

**ಶ್ರೀ ಅರವಿಂದೋ ಸೊಸೈಟಿ ಬ್ರ್ಯಾಂಚ್, ಧಾರವಾಡ.**

ನವ್ಹೆಂಬರ 24, 2010ರ ದರ್ಶನ ದಿನದಂದು ಡಾ॥ ಅರುಣ ಕುಲಕರ್ಣಿ ಅವರ ಮನೆಯಲ್ಲಿ ಆ ದಿನದ ಆಚರಣೆಗಾಗಿ ಒಟ್ಟಿಗೆ ಸೇರಿದ್ದರು. ಆ ಸಿದ್ಧಿಯ ದಿನ ನಡೆದ ವಿಶೇಷ ಘಟನೆಯನ್ನು ಕುರಿತು ಶ್ರೀ ಅರವಿಂದರ ಚರಿತ್ರೆಯಿರುವ ಪುಸ್ತಕದಲ್ಲಿ ವರ್ಣಿಸಿದ ಭಾಗವನ್ನು ಓದಿ ಹೇಳಲಾಯಿತು. "ಸಾವಿತ್ರಿ" ಮಹಾಕಾವ್ಯದ ಕೆಲವು ಮಹತ್ವದ ಸಾಲುಗಳನ್ನು ಓದಿ ಹೇಳಲಾಯಿತು. ಡಾ॥ ಕುಲಕರ್ಣಿ ಅವರ ಮನೆಯಲ್ಲಿ ಶ್ರೀ ಅರವಿಂದರ ಪುಣ್ಯಾವಶೇಷಗಳನ್ನು ಸ್ಥಾಪಿಸಲಾಗಿದೆ. ಹಾಗಾಗಿ ದರ್ಶನ ದಿನಗಳ ಆಚರಣೆಯನ್ನು ಅಲ್ಲಿ ಒಟ್ಟಿಗೆ ಸೇರಿ ಆಚರಿಸುವುದನ್ನು ರೂಢಿಸಿಕೊಂಡು ಬರಲಾಗಿದೆ. ಶ್ರೀ ಅರವಿಂದಾಶ್ರಮದಲ್ಲಿ ಅಂದು ವಿತರಿಸಿದ ಸಂದೇಶವನ್ನು ಅಂತರ್ಜಾಲ (internet) ದ ಮೂಲಕ ದೊರಕಿಸಿ ಅದನ್ನು ಸಭಿಕರಿಗೆ ಓದಿ ಹೇಳಲಾಯಿತು. ಪ್ರಾರ್ಥನೆ, ಧ್ಯಾನಗಳೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

*

ಡಿಸೆಂಬರ 5, 2010ರ ದರ್ಶನ ದಿನದಂದು ಮೇಲೆ ಹೇಳಿದ ಸ್ಥಳದಲ್ಲಿ ಆಚರಿಸಲಾಯಿತು. "ಡಿಸೆಂಬರ 5ರ ಸ್ಮರಣೆ" ಶೀರ್ಷಿಕೆಯಡಿಯಲ್ಲಿ ರ್‍ಹೋಡಾ ಪಿ ಲ ಕೊಕ್ (Rhoda P Le Cock) ಅವರು ಬರೆದ ಲೇಖನದಲ್ಲಿ (ಈ ಲೇಖನ ಅಖಿಲ ಭಾರತ ಪತ್ರಿಕೆ ಡಿಸೆಂಬರ 2006 ಇದರಲ್ಲಿ ಪ್ರಕಟವಾಗಿದೆ) ಶ್ರೀ ಅರವಿಂದರ ಕೊನೆಯ ದಿನಗಳಲ್ಲಿ ನಡೆದ ಘಟನೆಗಳನ್ನು ಹೃದಯ ತಟ್ಟುವಂತೆ ವರ್ಣಿಸಿದ್ದಾರೆ. ಅದನ್ನು ಸಭಿಕರಿಗೆ ಓದಿ ಹೇಳಲಾಯಿತು. ಶ್ರೀ ಅರವಿಂದರ ಯೋಗದ ವಿಶೇಷತೆ-ಯನ್ನು ಒತ್ತಿ ಹೇಳುವ ಇಂಗ್ಲೀಷಿನಲ್ಲಿದ್ದ ಲೇಖನವನ್ನು ಓದಲಾಯಿತು. ಅಂತ-ರ್ಜಾಲದಿಂದ ಪಡೆದ ಆ ದಿನದ ಸಂದೇಶವನ್ನು ಸಭಿಕರಿಗೆ ತಿಳಿಸಲಾಯಿತು. ಪ್ರಾರ್ಥನೆ, ಧ್ಯಾನಗಳೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್, ಬೆಂಗಳೂರು.

ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ "ಶ್ರೀ ಅರವಿಂದರ ಮಹಾಸಮಾಧಿ"ಯ ದಿನದ ಅಂಗವಾಗಿ 5ನೇ ಡಿಸೆಂಬರ 2010ರಂದು ಬೆಳಿಗ್ಗೆ 10 ರಿಂದ 10.30ರ ವರೆಗೆ ಸಾಮೂಹಿಕ ಧ್ಯಾನ ಜರುಗಿತು. ನಂತರ ಸಂದೇಶ ಪತ್ರ ವಿತರಿಸಲಾಯಿತು. 10.30 ರಿಂದ 11.30ರ ವರೆಗೆ ಶ್ರೀ ಭಾಸ್ಕರ್ ರೆಡ್ಡಿಯವರಿಂದ "ಋಗ್ವೇದಾಸ್ ಹೈ ಪಾಯಿಂಟ್ ಆಫ್ ಎವಲ್ಯೂಷನ್ ಫಾರ್ ಮ್ಯಾನ್" ಎಂಬ ವಿಷಯದ ಬಗ್ಗೆ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಶ್ರೀಮಾತಾರವಿಂದರ ಭಕ್ತರು ಹಾಗೂ ಹಿರಿಯ ಸಾಧಕರು ಭಾಗವಹಿಸಿದ್ದರು.

ದಿನಾಂಕ 12–12–2010ರಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ವಿದ್ಯಾಸಂಸ್ಥೆಯ ಶಾಲಾ ವಾರ್ಷಿಕೋತ್ಸವವನ್ನು ಜಯನಗರದ ಎಚ್.ಎನ್. ಕಲಾಕ್ಷೇತ್ರದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಬೆಳಗ್ಗೆ 10.30 ರಿಂದ 12.00ರ ವರೆಗೆ ಪೂರ್ವ ಪ್ರಾಥಮಿಕ ತರಗತಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಾಲಾ ಆಡಳಿತಾಧಿಕಾರಿ ಶ್ರೀಮತಿ ಪ್ರತಿಭಾ ಸಬ್ನೀಸ್ ಭಾಗವಹಿಸಿದ್ದರು. ಜ್ಯೋತಿ ಬೆಳಗುವುದರೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಕಿರಿಯ ವಿದ್ಯಾರ್ಥಿಗಳು ಕುಣಿದು ನಲಿದು ಸಂಭ್ರಮಿಸಿದರು.

ಸಂಜೆ 4 ರಿಂದ ಆರಂಭವಾದ ಪ್ರೌಢಶಾಲಾ ವಿಭಾಗದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಡಿ.ಆರ್. ರಾಜಾರಾಮ್, ನಿವೃತ್ತ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಆಗಮಿಸಿದ್ದರು. 2009–10ರ ಸಾಲಿನಲ್ಲಿ ಹತ್ತನೇ ತರಗತಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಮತ್ತು ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ತೋರಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಆರನೇ ತರಗತಿಯಿಂದ ಹತ್ತನೇ ತರಗತಿಯ ವರೆಗಿನ ವಿದ್ಯಾರ್ಥಿಗಳು ವಿವಿಧ ವಿನೋದಾವಳಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಸುಮನ ಸುಧೀಂದ್ರ ಶಾಲಾ ವಾರ್ಷಿಕ ವರದಿಯನ್ನು ಮಂಡಿಸಿದರು. ಸಂಸ್ಥೆಯ ಸಮಸ್ತರು ಹಾಗೂ ಪೋಷಕರು ಸಕ್ರೀಯವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು, ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಜರುಗಿತು.



## ಕರ್ನಾಟಕದ ಕೇಂದ್ರಗಳಿಗೆ ಧನಸಹಾಯ

**ವಿಷಯ:** ಕರ್ನಾಟಕದಲ್ಲಿ ಶ್ರೀ ಅರವಿಂದ ಸೊಸೈಟಿ ಸ್ಥಾನಿಕ ಕೇಂದ್ರಗಳ ಕಾರ್ಯ ಪ್ರಗತಿಗಾಗಿ ಶ್ರೀ ಅರವಿಂದ ಸೊಸೈಟಿ ಪ್ರಾಂತ ಸಮಿತಿ ಕರ್ನಾಟಕದ ವತಿಯಿಂದ ನೀಡುವ ಧನ ಸಹಾಯವನ್ನು ಕುರಿತು.

1. ಕರ್ನಾಟಕದಲ್ಲಿ ಕೆಲವು ಕೇಂದ್ರಗಳಿಂದ ಮೌಖಿಕವಾಗಿ ಬಂದ ಬೇಡಿಕೆಗಳಿಗೆ ಅನುಸಾರವಾಗಿ ಶ್ರೀ ಅರವಿಂದ ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ, ಬೆಂಗಳೂರು ಇವರ ವತಿಯಿಂದ ಸಾಧ್ಯವಾದ ಮಟ್ಟಿಗೆ ಧನಸಹಾಯವನ್ನು ಮುದ್ರಿತ–ಪುಸ್ತಕಗಳು, ಛಾಯಾಚಿತ್ರಗಳು, ಕ್ಯಾಸೆಟ್‌ಗಳು ಹಾಗೂ ಅಗರಬತ್ತಿ ಮುಂತಾದ ಆಶ್ರಮ ನಿರ್ಮಿತ ವಸ್ತುಗಳ ರೂಪದಲ್ಲಿ ನೀಡಲು ನಿರ್ಧರಿಸ–ಲಾಗಿದೆ. ವಸ್ತುಗಳನ್ನು ನಮ್ಮ ಪ್ರಾಂತ ಸಮಿತಿಯ ಸಂಯೋಜಕರಾದ ಶ್ರೀ. ವಿ. ಬಿ. ಬತ್ತಿಕೊಪ್ಪದ ಇವರ ಮೂಲಕ ನೀಡಲು ತೀರ್ಮಾನಿಸಲಾಗಿದೆ. ಕೇಂದ್ರಗಳು ತಮ್ಮ ಕೇಂದ್ರಕ್ಕೆ ಅಗತ್ಯವಿರುವ ಧನಸಹಾಯದ ಮೊತ್ತವನ್ನು ನಿರ್ಧರಿಸಿಕೊಂಡು ಸಂಯೋಜಕರಿಗೆ ತಿಳಿಸಿದರೆ ಕೂಡಲೆ ಅಗತ್ಯ ಮೊತ್ತದ ದುಪ್ಪಟ್ಟು ಬೆಲೆಯ ವಸ್ತುಗಳನ್ನು ಕೇಂದ್ರಗಳಿಗೆ ಶ್ರೀ ಅರವಿಂದ ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕದ ವತಿಯಿಂದ ಸಂಯೋಜಕರು ಪೂರೈಸುತ್ತಾರೆ. ಅತೀ ಹೆಚ್ಚೆಂದರೆ 30 ದಿನಗಳೊಳಗಾಗಿ ಆ ವಸ್ತುಗಳನ್ನು ನಿಮ್ಮ ಕೇಂದ್ರದ ವತಿಯಿಂದ ಬೇಕಾದ ಭಕ್ತರಿಗೆ ಮಾರಾಟ ಮಾಡಿ ಶೇ.50%ರಷ್ಟು ಹಣವನ್ನು ತಮ್ಮ ಕೇಂದ್ರಕ್ಕೆ ಧನಸಹಾಯವೆಂದು ಇಟ್ಟುಕೊಂಡು ಉಳಿದ ಶೇ.50%ರಷ್ಟು ಹಣವನ್ನು ಪ್ರಾಂತ ಸಮಿತಿ, ಬೆಂಗಳೂರು ಇವರಿಗೆ ಕೂಡಲೆ ಡಿ.ಡಿ. ಮೂಲಕ ಕಳುಹಿಸಿ ಕೊಡುವುದಾಗಬೇಕು.

   ತಮಗೆ ಅಗತ್ಯವೆನಿಸುವ ಇನ್ನಿತರ ವಿವರಗಳನ್ನು ಸಂಯೋಜಕರು ಭೇಟಿಯಾದಾಗ ತಿಳಿಸಿಕೊಡುತ್ತಾರೆ.

   ದೇಶದಲ್ಲಿಯೇ ಪ್ರಥಮವಾಗಿ ಪ್ರಾರಂಭ ಮಾಡಿದ ಈ ಸದವಕಾಶದ ಯೋಜನೆಯ ಪ್ರಯೋಜನವನ್ನು ಗುರುಬಂಧುಗಳು ಸದುಪಯೋಗ ಮಾಡಿಕೊಳ್ಳಲು ಈ ಮೂಲಕ ವಿನಂತಿಸಲಾಗಿದೆ.

2. ದಿನಾಂಕ 22, 23 ಫೆಬ್ರವರಿ 2004 ರಂದು ಪಾಂಡಿಚೆರಿಯಲ್ಲಿ ನಡೆದ ಶ್ರೀ ಅರವಿಂದ ಸೊಸೈಟಿ, ಕರ್ನಾಟಕದ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಶ್ರೀ ಅರವಿಂದ ಸೊಸೈಟಿಯ ಸ್ಥಾನಿಕ ಕೇಂದ್ರಗಳು ಜನಸಂಖ್ಯೆ 10,000ಕ್ಕೆ ಮೀರದಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಿದರೆ ಅಂತಹ ಶಾಲೆಗಳಲ್ಲಿ ಕೆಲಸ ಮಾಡುವ ಉಪಾಧ್ಯಯರುಗಳಿಗೆ ಪ್ರತಿ ತಿಂಗಳೂ ಸಂಬಳ ನೀಡಲು 500/–ರೂ. ಗಳ ಧನಸಹಾಯವನ್ನು ಶ್ರೀ ಅರವಿಂದ ಸೊಸೈಟಿ ಪ್ರಾಂತ ಸಮಿತಿ, ಕರ್ನಾಟಕದ ವತಿಯಿಂದ ನೀಡಲು ನಿರ್ಧರಿಸಲಾಗಿದೆ. ಈ ಧನಸಹಾಯ ಶಾಲೆ ಪ್ರಾರಂಭಿಸಿದ ಮೊದಲನೆ ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಈಗಾಗಲೆ, ಶ್ರೀ ಅರವಿಂದರ ಸೊಸೈಟಿ ಸ್ಥಾನಿಕ ಕೇಂದ್ರ ಗರಗ್ ವತಿಯಿಂದ 3 ಶಾಲೆಗಳನ್ನು ಗರಗ್, ಮಮ್ಮಿಗಟ್ಟಿ ಮತ್ತು ಉಡಿಕೇರಿಯಲ್ಲಿ ತೆರೆದು ಈ ಯೋಜನೆಯ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ.

ಎಲ್ಲ ಕೇಂದ್ರಗಳು ಈ ಸದವಕಾಶದ ಯೋಜನೆಯ ಪ್ರಯೋಜನವನ್ನು ಉಪಯೋಗಿಸಿಕೊಂಡು ಶ್ರೀ ಮಾತಾರವಿಂದರ ಕೃಪೆಗೆ ಪಾತ್ರರಾಗಲು ಕೋರಲಾಗಿದೆ.

ಇದರ ಬಗ್ಗೆ ಉಳಿದ ವಿವರಗಳನ್ನು ಶ್ರೀ ಬತ್ತಿಕೊಪ್ಪದ, ಸಂಯೋಜಕರು, ಶ್ರೀ ಅರವಿಂದ ಸೊಸೈಟಿ ಪ್ರಾಂತ ಸಮಿತಿ, ಕರ್ನಾಟಕ ಇವರು ಕೇಂದ್ರಗಳಿಗೆ ಭೇಟಿ ನೀಡಿದಾಗ ಅವರಿಂದ ತಿಳಿದುಕೊಳ್ಳಬಹುದಾಗಿದೆ.

ಇಂತಿ ತಮ್ಮ ಗುರು–ಬಂಧು
ಕಾರ್ಯಾಧ್ಯಕ್ಷರು
ಶ್ರೀ ಅರವಿಂದ ಸೊಸೈಟಿ ಪ್ರಾಂತ ಸಮಿತಿ, ಕರ್ನಾಟಕ



## REVISION OF THE SOCIETY'S MEMBERSHIP FEES IN INDIA

### With effect from 1st April, 2009

| Sl.No. | Membership Category | Amount in Rs. |
|---|---|---|
| 1. | Member with Magazine | |
| | For One Year | 150 |
| | For Three Years | 440 |
| | For Five Years | 730 |
| 2. | Donor Member | |
| | For 10 Years | 3000 |
| 3. | Contributing Member | |
| | For One Year | 300 |
| 4. | Contibuting Donor Memeber | |
| | For 15 Years | 10,000 |